ಅಪರಂಜಿ

ಡಿಸೆಂಬರ್ 2006

ತಿಳಿನಗೆಯ ಕಾರಂಜಿ



ಪ್ರಕಾಶ್
ಶಿವು
ಬಾಗೂರು ಚಂದ್ರು
ದಾಶರಥಿ ದೀಕ್ಷಿತ್
ಎಚ್. ಗೋಪಾಲಕೃಷ್ಣ
ಕು.ಕ.
ಬೇಲೂರು ರಾಮಮೂರ್ತಿ
ಹಾ.ರಾ.
ಪ್ರಭಾ
ಲೋಕನಾಥ ದೀಕ್ಷಿತ್
ಬಿ.ಜಿ. ರುದ್ರಪ್ಪ
ಸಾಯಿಲಕ್ಷ್ಮಿ .ಎಸ್
ದಂಸಲಿ
ಎನ್. ರಾಮನಾಥ್

ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ .....



ಸಂಪುಟ 24 ಸಂಚಿಕೆ - 3
ಡಿಸೆಂಬರ್ - 2006

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080-23345259
email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್,
ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. email: brmurthy@dataone.in



ಂ ಪ್ರಕಾಶ್

''ತೆರಿಗೆಗಳ್ಳರಿಗೆ ಗಾಳ; ತಂತ್ರಜ್ಞಾನ ನೆರವು''

- ಹೇಳಿಕೆ

ಇದನ್ನೇ ಚಿದಂಬರ ರಹಸ್ಯ ಎನ್ನುವುದು!!

★★★

ನಾಡ ಗೀತೆ ಸಂಕ್ಷಿಪ್ತಗೊಳಿಸಲು ತಜ್ಞರ ಸಮಿತಿ ಶಿಪಾರಸು

- ಸುದ್ದಿ

ಗೀತೆಯ ಕ(ಂವೆ)ಂಪು ಸೊರಗದಿರಲಿ!!

★★★

''ಗ್ರೆಗ್ ಚಾಪೆಲ್‌ಗೆ ತಾಂಬುಲ ಕೊಟ್ಟು ಕಳಿಸಿ!''

- ಸಲಹೆ

ಅವರು ಸ್ವೀಕರಿಸಬೇಕಲ್ಲ?!

★★★

ಮೂಳೆ ವೃದ್ಧಿಗೆ ಆಕರ ಕೋಶಯ ತಂತ್ರಜ್ಞಾನ

-ಸುದ್ದಿ

ಕನ್ನಡದಲ್ಲಿ 'ಸ್ಟೆಮ್' ಸೆಲ್ ಅಂತಾರಂತೆ!!

★★★

ಬ್ಲೇಡ್ ಕಂಪನಿ ಅವ್ಯವಹಾರ

-ಸುದ್ದಿ

ಪಾಪ, ಯಾರಿಗೋ ಕ್ಷೌರ ಆಗುತ್ತಿರಬೇಕು?!

★★★

'ನಾವು ಕೇರ್ ತಗೋತ್ತೇವೆ'

- ಜಾಹೀರಾತು

ಅವರ ಚಿಕಿತ್ಸೆಗಳೂ ಕನ್ನಡದಂತಾಗದಿರಲಿ!!

★★★

ಭಾರತದ ಕ್ರಿಕೆಟ್ ಟೀಮಿನವರು Blazer ಇಲ್ಲದೆ ದಕ್ಷಿಣ ಆಫ್ರಿಕಾಗೆ

- ಕ್ರೀಡಾ ಸುದ್ದಿ

ಆದರೂ, Let them Blaze their way to glory ಅನ್ನೋಣ!!

★★★

ಧನ್ಯವಾದಗಳು

ಕೊರವಂಜಿ ಅಪರಂಜಿ ಟ್ರಸ್ಟ್ ಆರ್ಥಿಕ ಸುಭದ್ರತೆ ಸಾಧಿಸಿ, ತನ್ಮೂಲಕ ಅಪರಂಜಿಯ ತಿಳಿಹಾಸ್ಯದ ತಿರುಳನ್ನು ನಿರಂತರವಾಗಿ ಹಂಚುತ್ತಿರಲಿ ಅನ್ನುವ ಮಹದಾಕಾಂಕ್ಷೆಯಿಂದ ನಮ್ಮ ಮನವಿಯನ್ನು ಮನ್ನಿಸಿ ಈ ಕೆಳಕಂಡ ಸಂಸ್ಥೆ ರೂ.15,000/- ದೇಣಿಗೆಯನ್ನು ಟ್ರಸ್ಟ್‌ಗೆ ನೀಡಿದೆ.

ಶ್ರೀ ನಾಗಪ್ಪ ಚಂದ್ರಶೇಖರ್

ಡೇಟಾ ಸೆನ್ಸಾರ್ ಇಂಡಿಯ (ಪ್ರೈ) ಲಿ.

370, 10ನೇ ಅಡ್ಡರಸ್ತೆ, ನಾಲ್ಕನೇ ಹಂತ

ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು - 560 058

ಇವರ ಕೊಡುಗೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತ ಇನ್ನಿತರ ಮಹನೀಯರುಗಳೂ ಟ್ರಸ್ಟ್‌ಗೆ ಸಹಾಯ ನೀಡಬೇಕೆಂದು ವಿನಂತಿ. ನಿಮ್ಮ ಚೆಕ್ಕು/ಡ್ರಾಫ್ಟ್‌ಗಳು "ಕೊರವಂಜಿ ಅಪರಂಜಿ ಟ್ರಸ್ಟ್" ಹೆಸರಿಗಿದ್ದು ಅದನ್ನು ಉಪ ಸಂಪಾದಕರ ವಿಳಾಸಕ್ಕೆ ರವಾನಿಸಿ.

- ಉಪ ಸಂಪಾದಕರು ಅಪರಂಜಿ

ಕಡಲೀಚೆಯ ಕುಡಿನೋಟ

– ಶಿವು

ಹದಿನೇಳನೆಯ ಶತಮಾನದಲ್ಲಿ ಕಟ್ಟಿದ ಮನೆಯೊಂದರಲ್ಲಿ ಒಂದು ರಾತ್ರಿ ಕಳೆಯುವ ಅವಕಾಶ ನಿಮಗೆಂದಾದರೂ ದೊರೆತಿದೆಯೇ? ಮೊನ್ನೆ ಇಲ್ಲಿನ ಬೇಕ್‌ವೆಲ್ ಎಂಬ ಹಳ್ಳಿಗೆ ಮಿತ್ರ ಶ್ರೀಧರನ ಆಹ್ವಾನದಮೇಲೆ ಹೋಗಿದ್ದಾಗ ಈ ಅನುಭವ ನನ್ನದಾಯಿತು. ಶ್ರೀಧರ್ ಮತ್ತು ಜೆರಲ್ಡೀನ್ ದಂಪತಿಗಳು ಈ ಹಳ್ಳಿಯಲ್ಲಿ ಕಂಟ್ರಿ ಬುಕ್‌ಷಾಪ್ ಎಂಬ ದೊಡ್ಡ ಪುಸ್ತಕದ ಮಳಿಗೆಯೊಂದನ್ನು ನಡೆಸುತ್ತಿದ್ದಾರೆ. ಕಳೆದ ಜನವರಿಯಲ್ಲಿ ಈ ದಂಪತಿಗಳು ಬೆಂಗಳೂರಿಗೆ ಬಂದಿದ್ದಾಗ ನನಗೆ ಅವರ ಪರಿಚಯವಾಯಿತು. 'ಇಂಗ್ಲೆಂಡಿಗೆ ಬಂದಾಗ ನಮ್ಮ ಮನೆಗೂ ಬನ್ನಿ' ಎಂದು ಅವರು ನನ್ನನ್ನು ಅಂದು ಆಹ್ವಾನಿಸಿದ್ದರು. ನಾನು ಇಲ್ಲಿಗೆ ಬಂದ ಹೊಸದರಲ್ಲೇ ಶ್ರೀಧರ್ ಗೆ ಫೋನ್ ಮಾಡಿದ್ದೆ. 'ಅಕ್ಟೋಬರ್ ಉತ್ತರಾರ್ಧದಲ್ಲಿ ಇಲ್ಲಿ ಆಟಮ್ ಫೆಸ್ಟಿವಲ್ ನಡೆಯುತ್ತಿದೆ. ಹದಿನೆಂಟರಂದು ಎರಡು ಪುಸ್ತಕಗಳ ಬಿಡುಗಡೆ ಸಮಾರಂಭ ಏರ್ಪಡಿಸಿದ್ದೇವೆ. ಪುಸ್ತಕಗಳ ಬಗ್ಗೆ ಲೇಖಕರು ಅಂದು ಬಂದು ತಮ್ಮ ಕೃತಿಗಳ ಮೇಲೆ ಮಾತನಾಡುತ್ತಾರೆ. ಹಿಂದಿನ ದಿನವೇ ನಮ್ಮಲ್ಲಿಗೆ ಬನ್ನಿ. ಸಮಾರಂಭ ಮುಗಿಸಿಕೊಂಡು ಹಿಂತಿರುಗಬಹುದು' ಎಂದು ಆತ ಆದರದಿಂದ ಆಮಂತ್ರಣ ನೀಡಿದ. ಅಂತೆಯೇ ನಾನು ಹದಿನೇಳರಂದು ಸಂಜೆ ಬೇಕ್‌ವೆಲ್ ಹತ್ತಿರದ ಚೆಸ್ಟರ್‌ಫೀಲ್ಡ್ ಸ್ಟೇಷನ್ನಿನಲ್ಲಿ ಇಳಿದೆ.

ನನ್ನನ್ನು ಇದಿರುಗೊಳ್ಳಲು ಶ್ರೀಧರ್ ಮತ್ತು ಜೆರಲ್ಡೀನ್ ಸ್ಟೇಷನ್ನಿಗೆ ಬಂದಿದ್ದರು. ಎತ್ತರದ ನಿಲುವು, ತೆಳುವಾದ ದೇಹಮಾಟ, ಕಪ್ಪು ಬಣ್ಣದ ಜೀನ್ಸ್ ಮತ್ತು ಅದೇ ಬಣ್ಣದ ಟೀಷರ್ಟ್ ಧರಿಸಿದ್ದ ಶ್ರೀಧರ್ ಕೆದರುಕೇಶಿ. ಹೆಗಲಿಗೆ ಒಂದು ತೂಗುಚೀಲ ತಗುಲಿಸಿಬಿಟ್ಟರೆ ಸಾಕು, ಥೇಟ್ ಬಂಡಾಯ ಕವಿ.. ಹೊನ್ನಗೂದಲು, ತುಟಿಯಂಚಿನಲ್ಲಿ ಸದಾ ತುಂಟನಗೆ ಸೂಸುತ್ತಿದ್ದ ಪುಟ್ಟ ಮೈಕಟ್ಟಿನ ಜೆರಲ್ಡೀನ್ ಗಂಡನ ಭುಜದ ಮಟ್ಟಕ್ಕೂ ಬರಲಾರಳು. ಎಲ್ಲ ಯಶಸ್ವಿ ಪತ್ನಿಯರಂತೆ ಗಂಡನನ್ನು ಕಿರುಬೆರಳಿನ ಸುತ್ತ ಜೋಪಾನವಾಗಿ ಇರಿಸಿಕೊಂಡಿರುವಂತೆ ಕಾಣಿಸಿತು ಅವರ ಸಂಭಾಷಣೆಯನ್ನು ಗಮನಿಸಿದಾಗ.

'ಷೀ ಕೂಮರ್, ಶ್ರೀ ಪುಸ್ತಕದ ಅಂಗಡಿಯಲ್ಲಿ ಇಳಿದುಕೊಳ್ಳುತ್ತಾನೆ. ನಾಳೆ ಸಮಾರಂಭಕ್ಕೆ ಇನ್ನೂ ತುಂಬಾ ಕೆಲಸ ಬಾಕಿ ಇದೆ ನೀನು ನನ್ನೊಂದಿಗೆ ಮನೆಗೆ ಬಂದು ಟೀ ಕುಡಿದು ನಂತರ ನಾವು ಅಂಗಡಿಗೆ ಪುನಃ ಬರಬಹುದು .ಪರವಾಗಿಲ್ಲ ತಾನೆ?' ಅಂತ ಜೆರಲ್ಡೀನ್ ಕೇಳಿದಳು.

'ನಿರಂತರ ರಜೆಯಲ್ಲಿರೋನು ನಾನು. ಎಲ್ಲಿದ್ದರೇನು , ಎಲ್ಲಾ ಹೊಸ ಅನುಭವ ತಾನೆ' ಎನ್ನುತ್ತ ನಾನು ಸಮ್ಮತಿಸಿದೆ.

ನಾವೆಲ್ಲಾ ಕಾರಿನಲ್ಲಿ ಕುಳಿತು ಬೇಕ್‌ವೆಲ್‌ನತ್ತ ಹೊರಟೆವು. ಹಾದಿಯಲ್ಲಿ ನಿರಂತರ ಕಾಮೆಂಟರಿ.

'ಅಲ್ಲಿ ನೋಡು, ಸೊಟ್ಟಗೆ ಬಾಗಿರುವ ಟೋಪಿಯಂತೆ ಕಾಣುತ್ತಲ್ಲಾ ಅದೇ ಚೆಸ್ಟರ್‌ಫೀಲ್ಡ್‌ನ ಚರ್ಚಿನ ಗೋಪುರ. ಮರದಿಂದ ಮಾಡಿರೋದು. ಒಂದು ಪಕ್ಕ ತೇವಕ್ಕೆ ಹಿಗ್ಗಿ ಹೀಗೆ ಬಾಗಿದೆ. ಅದನ್ನೇ ಒಂದು ಪ್ರವಾಸಿಗರ ಆಕರ್ಷಣೆ ಅಂತ ಮಾಡಿದಾರೆ ಇಲ್ಲಿನೋರು. ಅಗೋ ಅಲ್ಲಿ ಕಾಣುತ್ತಲ್ಲಾ ಅದೇ ಚಾಟ್ಸ್‌ವರ್ತ್ ಕ್ಯಾಸಲ್. ಬಹು ಹಿಂದಿನಿಂದ ಇಲ್ಲಿನ ಪಾಳೆಯಗಾರರ ಅರಮನೆಯಾಗಿತ್ತು ಅದು. ಈಗ ಅದರ ಒಂದು ಭಾಗವನ್ನ ಹೋಟೆಲ್ ಆಗಿ ಪರಿವರ್ತಿಸಿದ್ದಾರೆ. ನಿಮ್ಮ ಮೈಸೂರಿನಲ್ಲಿ ಲಲಿತಮಹಲ್ ಪ್ಯಾಲೇಸ್ ಇಲ್ಲವೇ ಹಾಗೆ. ಇಂದು ಸಂಜೆ ಇಲ್ಲಿಗೇ ಬರೋಣ ಊಟಕ್ಕೆ ....'

ಸ್ವಲ್ಪ ಸಮಯದಲ್ಲೇ ನಮ್ಮ ಹಾದಿ ಊರನ್ನು ಬಿಟ್ಟು ಹೊಲಗಳ ಮಧ್ಯೆ ಸಾಗಿತ್ತು. ನೆಲದ ಮಟ್ಟದಲ್ಲಿ ಕಗ್ಗತ್ತಲು ಆವರಿಸಿದ್ದರೂ, ಆಗಸದಲ್ಲಿ ಇನ್ನೂ ಗಾಢನೀಲಿಯನ್ನು ಕಾಣಬಹುದಾಗಿತ್ತು. ದೂರದ ಗುಡ್ಡದ ಮೇಲೆ ಮಣಿಮಣಿ ಯಾಗಿ ದೀಪಗಳ ಸಾಲೊಂದು ಕಂಡಿತು.

'ಅದೇ ಬೇಕ್‌ವೆಲ್. ಅಲ್ಲೇ ನಮ್ಮ ಮಳಿಗೆ ಇರೋದು' ಎಂದು ಶ್ರೀಧರ್ ವಿವರಿಸಿದ. ಮಳಿಗೆಯನ್ನು ಸೇರಿ ಶ್ರೀಧರನನ್ನು ಅಲ್ಲಿ ಇಳಿಸಿ ನಾವು ಮನೆಯೆಡೆ ಹೊರಟೆವು. ಈ ಪುಸ್ತಕದ ಮಳಿಗೆಯ ಕಟ್ಟಡ ಹಿಂದೆ ಒಂದು ರೇಲ್ವೇ ಸ್ಟೇಷನ್ ಆಗಿತ್ತಂತೆ. ಕನಿಷ್ಟಮಟ್ಟಕ್ಕೂ ಗ್ರಾಹಕರಿಲ್ಲದ ಕಾರಣ ಇಲ್ಲಿನ ರೇಲ್ವೇ ಓಡಾಟವನ್ನು ನಿಲ್ಲಿಸಿದಾಗ ಆ ಸ್ಟೇಷನ್ ಪಾಳುಬಿದ್ದು ಬಹು ಕಡಿಮೆ ಬೆಲೆಗೆ ಇವರಿಗೆ ಬಳಕೆಗೆ ಸಿಕ್ಕಿತಂತೆ. ಮೇಲು ನೋಟಕ್ಕೆ ಐವತ್ತರ ದಶಕದ ಕಂಟೋನ್ಮೆಂಟ್ ರೇಲ್ವೇ ಸ್ಟೇಷನ್ನಿನಂತೆಯೇ ಕಾಣುತ್ತಿತ್ತಿ ಈ ಅಂಗಡಿ.

ಜೆರಲ್ಡೀನಳೊಂದಿಗೆ ಅವಳ ಮನೆ ತಲುಪಿದಾಗ ಸಂಜೆ ಏಳೂವರೆ. ಅವರ ಮನೆ ಅನೇಕ ರೀತಿಯಲ್ಲಿ ತೇಜಸ್ವಿಯವರ ಮೂಡಿಗೆರೆ ಮನೆಯನ್ನು ನೆನಪಿಸಿತು. ಅಲ್ಲಿನಂತೆಯೇ ಇವರ ಮನೆಯ ಸುತ್ತಲಿನ ಒಂದು ಎಕರೆಯಷ್ಟು ವಿಶಾಲವಾದ ತೋಟದ ಮಧ್ಯೆ ಡೆರ್ವೆಂಟ್ ಎಂಬ ಪುಟ್ಟ ಝರಿಯೊಂದು ಹರಿಯುತ್ತಿದೆ. ಮನೆಯೂ ಸಹಾ ಹಳೆಯಕಾಲದ ಹೆಂಚಿನ ಮನೆ. ವ್ಯತ್ಯಾಸವೆಂದರೆ ಈ ಮನೆಯನ್ನು ಕಟ್ಟಿದ್ದು ಹದಿನೇಳನೆಯ ಶತಮಾನದಲ್ಲಿ. ಆಗಿನ ಕಾಲದಲ್ಲಿ ಇದು ಪಂಪಾಹೌಸ್ ಆಗಿತ್ತಂತೆ. ಡೆರ್ವೆಂಟ್ ನದಿಯ ನೀರನ್ನು ಇಲ್ಲಿಂದ ನಿಯಂತ್ರಿಸಿ ಒಂದು ಮೈಲು ದೂರದಲ್ಲಿದ್ದ ಸ್ಪಿನ್ನಿಂಗ್ ಮಿಲ್‌ಗೆ ಸರಬರಾಜು ಮಾಡುತ್ತಿದ್ದರಂತೆ. ಈ ಪುರಾತನ ಪಂಪ್ ಹೌಸನ್ನು ಒಂದು ಅಚ್ಚುಕಟ್ಟಾದ ಬೆಚ್ಚಗಿನ ಮನೆಯನ್ನಾಗಿ ಪರಿವರ್ತಿಸಿ ಸಿಂಗರಿಸಿರುವ ಹೆಚ್ಚುಗಾರಿಕೆ ಜೆರಲ್ಡೀನಳಿಗೆ ಸಲ್ಲಬೇಕು. ಮನೆಯ ಒಳಗೆ ಹೋದನಂತರ, ನನ್ನ ಅತಿಥೇಯಿಣಿ ಟೀ ಮಾಡಲು ಒಳಗೆ ಹೋದಳು. ನಾನು ಹತ್ತಿರದಲ್ಲೇ ಇದ್ದ ಪೋಸ್ಟರ್ ಮೇಲೆ ಕಣ್ಣಾಡಿಸಿದೆ. ಅದರಲ್ಲಿ ಮಾರನೆಯ ದಿನ ಬಿಡುಗಡೆಯಾಗಲಿರುವ ಪುಸ್ತಕಗಳ ವಿವರಗಳಿದ್ದವು.

'ದ ಕಾರ್ಪೊರೇಷನ್ ದಟ್ ಚೇಂಜ್ಡ್ ದ ವರ್ಲ್ಡ್' ಎಂಬ ಪುಸ್ತಕ ನಿಕ್ ರಾಬಿನ್ಸ್ ಬರೆದದ್ದು. ಈಸ್ಟ್ ಇಂಡಿಯಾ ಕಂಪನಿಯ ಬೆಳವಣಿಗೆ ವ್ಯವಹಾರ, ಅವ್ಯವಹಾರ, ಇವುಗಳ ಚಾರಿತ್ರಿಕ ಚಿತ್ರಣ ಇದು. ಇನ್ನೊಂದು ಪುಸ್ತಕ 'ದ ಲಾಸ್ಟ್ ಮೊಘಲ್'. ಇದನ್ನು ಬರೆದವನು ವಿಲಿಯಂ ಡಾರಿಂಪಲ್. ಮೊಘಲರ ಕೊನೆಯ ದೊರೆ ಬಹಾದ್ದೂರ್ ಷಾ ಝಫರ್ ನ ಜೀವಿತದಲ್ಲಿನ ಘಟನೆಗಳ ನಿರೂಪಣೆ. ಪರವಾಗಿಲ್ಲ, ನಾಳೆ ಭಾಷಣಗಳು

ಆಸಕ್ತಿ ಮೂಡಿಸಿದರೂ ಆಶ್ಚರ್ಯವಿಲ್ಲ ಎಂದುಕೊಳ್ಳುತ್ತಿರುವಂತೆಯೇ ಜೆರಲ್ಡೀನ್ ಟೀ ಟ್ರೇ ತಂದಳು. ಟೀ ಮುಗಿಸಿ ನಾವು ಪುನಃ ಹೊರಡುವಷ್ಟರಲ್ಲಿ ಶ್ರೀಧರ ಕಾಲ್ ಮಾಡಿ, 'ನಿಕ್ ಮತ್ತು ಕ್ರಿಸ್ಟೀನ್ ಅಂಗಡಿಗೆ ಬಂದಿದ್ದಾರೆ. ನಾವೆಲ್ಲಾ ಒಟ್ಟಿಗೆ ಹೋಟೆಲಿಗೆ ಬರುತ್ತೇವೆ. ನೀವಿಬ್ಬರೂ ನೇರವಾಗಿ ಅಲ್ಲಿಗೆ ಬಂದುಬಿಡಿ' ಎಂದು ತಿಳಿಸಿದ.

ನಾವು ಚಾಟ್ಸ್‌ವರ್ತ್ ಹೋಟೆಲ್ ಸೇರಿದಾಗ, ಮಿಕ್ಕವರೆಲ್ಲಾ ನಮಗಾಗಿ ಕಾಯುತ್ತಿದ್ದರು. ನಿಕ್‌ನದ್ದು ಸಾಧಾರಣ ಮೈಕಟ್ಟು, ಸಾಧಾರಣ ಎತ್ತರ. ತಲೆಯ ಮುಂಭಾಗದ ಬಾಲ್ಡ್‌ನೆಸ್ ಪ್ರಾರಂಭದ ಹಂತದಲ್ಲಿದ್ದು ದೊಡ್ಡ ಹಣೆ ಎನ್ನುವ ಮಟ್ಟಕ್ಕೆ ತಲುಪಿತ್ತು. ತೆಳುಹಳದಿ ಷರಟಿನ ಮೇಲೆ ಧರಿಸಿದ್ದ ಹಸಿರು ಓವರ್ ಕೋಟು ಅವನಿಗೆ ಚೆನ್ನಾಗಿಯೇ ಒಪ್ಪುತ್ತಿತ್ತು. ಕ್ರಿಸ್ಟೀನ್ ಜೆರಲ್ಡೀನಳ ಬಾಲ್ಯ ಗೆಳತಿ. ಚೆಸ್ಟರ್‌ಫೀಲ್ಡಿನಲ್ಲಿ ಕ್ರಾಫ್ಟ್ಸ್ ಅಂಗಡಿಯೊಂದನ್ನು ನಡೆಸುತ್ತಿದ್ದಾಳೆ.

ಭಾರತ ಈಕೆಗೇನು ಹೊಸದಲ್ಲ, ಎರಡು ವರ್ಷಗಳ ಹಿಂದೆ ಬೆಂಗಳೂರಿಗೂ ಬಂದಿದ್ದಳಂತೆ. 'ಈಗ ಹೇಗಿದೆ ನಿಮ್ಮ ಊರು? ನಾನು ಬಂದಾಗಲೇ ಟ್ರಾಫಿಕ್ ಸಿಕ್ಕಾಪಟ್ಟೆ ಇದ್ದ ನೆನಪು.' ಎಂದೆಲ್ಲಾ ವಿಚಾರಿಸಿದಳು.

'ನಿಮ್ಮ ಪುಸ್ತಕದ ಬಗ್ಗೆ ರೀಸರ್ಚ್ ಮಾಡಲು ನೀವು ಖಂಡಿತಾ ಭಾರತವನ್ನು ಭೇಟಿಮಾಡಿರಲೇ ಬೇಕು ಅಲ್ಲವೇ' ಎನ್ನುತ್ತಾ ನಾನು ನಿಕ್‌ನೊಂದಿಗೆ ಮಾತು ಪ್ರಾರಂಭಿಸಿದೆ.

'ರೀಸರ್ಚ್ ಒಂದೇ ಅಲ್ಲ, ವರ್ಷಕ್ಕೆರಡು ಬಾರಿ ಮಾವನ ಮನೆಗೆ ಹೋಗಿಬರುತ್ತೇನೆ. ನನ್ನ ಪತ್ನಿ ರೀತು ದಿಲ್ಲಿಯವಳು' ಮಾತುಕತೆ ನಿಕ್‌ನ ಪುಸ್ತಕದ ಬಗ್ಗೆ ತಿರುಗಿತು.

'ಯೂನಿಯನ್ ಕಾರ್ಬೈಡ್ ಭೋಪಾಲದಲ್ಲಿ ಎಸಗಿದ ಅಪರಾಧಕ್ಕೆ ನೂರು ಪಟ್ಟು ಹೆಚ್ಚಿನ ದೌರ್ಜನ್ಯವನ್ನು ಮಾಡಿದ ಕೀರ್ತಿ ಈಸ್ಟ್ ಇಂಡಿಯಾ ಕಂಪನಿಗೆ ಸಲ್ಲಬೇಕು. ನೇಯ್ದ ಸರಕನ್ನೆಲ್ಲಾ ಹಣ ಕೊಡದೇ ದೋಚಿಕೊಂಡು ಹೋಗುತ್ತಿದ್ದ ಕಂಪನಿಯ ಅಧಿಕಾರಿಗಳ ಕೃತ್ಯಗಳಿಂದ ಹತಾಶರಾಗಿ ಬಂಗಾಲೀ ನೇಕಾರರು, ಈ ದೌರ್ಜನ್ಯದಿಂದ ಮುಕ್ತರಾಗಲು ತಮ್ಮ ಹೆಬ್ಬೆರಳುಗಳನ್ನು ತಾವೇ ಕತ್ತರಿಸಿಕೊಂಡ ಅನೇಕ ಪ್ರಕರಣಗಳು ದಾಖಲಾಗಿವೆ. ಈಸ್ಟ್ ಇಂಡಿಯಾ ಕಂಪನಿಯ ಚರಿತ್ರೆಯನ್ನು ಕೂಲಂಕಷವಾಗಿ ಅಧ್ಯಯನಮಾಡಿದರೆ ಈಗಿನ ದಿನಗಳಲ್ಲೂ ಮಲ್ಟಿ ನ್ಯಾಷನಲ್ ಕಂಪನಿಗಳ ಕೊಳ್ಳೆಹೊಡೆಯುವ ಮನೋಭಾವವನ್ನು ಮೊದಲೇ ಗುರುತಿಸಿ, ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸಹಾಯವಾದೀತು ಎನ್ನಿಸುತ್ತೆ............' ಎಂದು ನಿಕ್ ಹೇಳುತ್ತಿರುವಂತೆ ಥ್ರೀ ಪೀಸ್ ಸೂಟ್ ಧರಿಸಿದ ಪರಿಚಾರಕನೊಬ್ಬ ತಿಂಡಿ ತೀರ್ಥಗಳನ್ನು ಮೇಜಿನಮೇಲೆ ಸಾವಧಾನವಾಗಿ ಇರಿಸಲು ಪ್ರಾರಂಭಿಸಿದ.

ಅಂದು ಸಂಜೆ ಆ ಮೇಜಿನ ಸುತ್ತ ಇದ್ದವರೆಲ್ಲಾ ಒಂದಲ್ಲ ಒಂದು ರೀತಿ ಭಾರತದ ಬಗ್ಗೆ ಅಭಿಮಾನ ಹೊಂದಿದ್ದವರೇ ಆಗಿದ್ದರಿಂದ ಮಾತುಕತೆ ಸುಲಲಿತವಾಗಿ ಹರಿಯಿತು. ಇಲ್ಲಿನ ಎನ್ನಾರೈ ಗುಂಪುಗಳ ಮಾತುಗಳಲ್ಲಿ ನಿಮಿಷಕ್ಕೆರಡು ಬಾರಿ ಕೇಳಿಸುವ 'ಭ್ರಷ್ಟಾಚಾರ' 'ಜಾತೀಯತೆ' ಎಂಬ ಪದಗಳು ಪ್ರಾಮಾಣಿಕ ಮೆಚ್ಚುಗೆಯ ಪೂರದಲ್ಲಿ ಕೊಚ್ಚಿಕೊಂಡು

ಹೋಗಿದ್ದವು. ನಿಕ್ ನನ್ನ ಹವ್ಯಾಸಗಳ ಬಗ್ಗೆ ಕುತೂಹಲ ತೋರಿಸಿದ. ನಾನು ನನ್ನ ಅಗಸ್ತ್ಯ ಚಟುವಟಿಕೆಗಳ ಬಗ್ಗೆ ಸ್ಥೂಲವಾಗಿ ತಿಳಿಸಿದೆ.

'ಇಲ್ಲಿನ ವರೆಗೆ ನಾನು ಭೇಟಿಮಾಡಿರುವ ನಿಮ್ಮ ನಾಡಿನ ಹಿರಿಯ ಪ್ರಜೆಗಳೆಲ್ಲಾ ಒಂದಲ್ಲ ಒಂದು ಬಗೆಯ ಸಮಾಜ ಸೇವಾ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದನ್ನು ಗಮನಿಸಿದ್ದೇನೆ. ರೀತುಳ ತಂದೆ ಕೂಡ ನಿವೃತ್ತರಾಗಿದ್ದರೂ ಭೂಸೇನಾ ವಿಧವೆಯರ ಸಂರಕ್ಷಣಾ ನಿಧಿಯ ಮೇಲ್ವಿಚಾರಣೆಯನ್ನು ಬಿಡುವಿನ ಸಮಯದಲ್ಲಿ ಬಹು ನಿಷ್ಠೆಯಿಂದ ಮಾಡುತ್ತಿದ್ದಾರೆ. ಈಗ ನಿನ್ನನ್ನೇ ತಗೋ. ಕೈಗಾರಿಕೆಯಿಂದ ನಿವೃತ್ತನಾದಮೇಲೆ, ಸುಖವಾಗಿ ಗಾಲ್ಫ್ ಆಡಿಕೊಂಡು ಕ್ಲಬ್ಬುಗಳಲ್ಲಿ ಕಾಲಕಳೆದುಬಿಡಬಹುದಾಗಿತ್ತು. ಅದನ್ನೆಲ್ಲಾ ಬಿಟ್ಟು ಮಕ್ಕಳಿಗೆ ವಿಜ್ಞಾನ ಕಲಿಸುವ ಒಳ್ಳೆಯ ಕೆಲಸವನ್ನು ಹಚ್ಚಿಕೊಂಡಿದ್ದೀಯ. ಭಾರತದ ಅಂತರಾತ್ಮದ ವಿಕಾಸಕ್ಕೆ ನೀವೆಲ್ಲಾ ಒಟ್ಟಾಗಿ ಮಾಡುತ್ತಿರುವ ಯತ್ನ ನಮ್ಮ ದೇಶದ ಹಿರಿಯಪ್ರಜೆಗಳಿಗೂ ಅನುಕರಣೀಯ' ಎಂದು ನಿಕ್ ಹೇಳಿದ. 'ಲಂಡನ್ನಿನ ಯಾವ ಅಂಗಡಿಯಲ್ಲಿ ಗಾಲ್ಫ್ ಚೆಂಡು ಕಡಿಮೆ ಬೆಲೆಯಲ್ಲಿ ದೊರೆಯತ್ತೆ' ಎಂದು ಕೇಳಬೇಕೆಂದಿದ್ದ ನನ್ನ ಪ್ರಶ್ನೆ ಗಂಟಲಿನಾಳದಲ್ಲೇ ಇಂಗಿಹೋಯಿತು.

ರಾಮನವಮಿ ದಿನಗಳಲ್ಲಿ ನಮ್ಮಲ್ಲಿ ಸಾರ್ವಜನಿಕ ಸಂಗೀತ ಕಛೇರಿ ಏರ್ಪಡಿಸುಲ್ವೇ, ಅದೇ ರೀತಿ ಇಂಗ್ಲೆಂಡಿನಲ್ಲಿಯೂ ಸಹಾ ಬೇಸಿಗೆಯ ತಿಂಗಳುಗಳಾದ ಜೂಲೈ ಆಗಸ್ಟ್ ಮತ್ತು ಸೆಪ್ಟೆಂಬರ್‌ಗಳಲ್ಲಿ ಪ್ರಾಮನಾಡ್ ಕಾನ್ಸರ್ಟ್ ಗಳೆಂಬ ಪಾಶ್ಚಾತ್ಯ ಶಾಸ್ತ್ರೀಯ ಸಂಗೀತದ ಕಾರ್ಯಕ್ರಮಗಳನ್ನು ಇಲ್ಲಿನ ಮುಖ್ಯ ಪಟ್ಟಣಗಳಲ್ಲಿ ಏರ್ಪಡಿಸುತ್ತಾರೆ. ಈ ಸಂಗೀತ ಕಛೇರಿಗಳ ಸರಣಿ ಜೂಲೈನಲ್ಲಿ ಪ್ರಾರಂಭವಾಗಿ ಸೆಪ್ಟೆಂಬರಿನ ಎರಡನೇ ಶನಿವಾರದ ಹೊತ್ತಿಗೆ ಮುಗಿಯುತ್ತದೆ. ಕೊನೆಯದಿನ ಲಂಡನ್ನಿನ ಹೈಡ್ ಪಾರ್ಕಿನಲ್ಲಿ ಭಾರಿ ಜನಸಂದಣಿ ಸೇರುತ್ತದೆ. ಅಂದು ಬಹುಪಾಲು ಸಮಯ ದೇಶಭಕ್ತಿ ಗೀತೆಗಳಿಗೆ ಮೀಸಲು. ವೇದಿಕೆಯಿಂದ ಈ ಗೀತೆಗಳನ್ನು ಹಾಡುತ್ತಿದ್ದರೆ ಪಾರ್ಕಿನಲ್ಲಿ ನೆರೆದಿರುವ ಜನತೆ ಒಕ್ಕೊರಲಿನಿಂದ ದನಿಗೂಡಿಸಿ ಹಾಡುವುದನ್ನು ಕೇಳುವುದೇ ಒಂದು ಮೋಜು. 'ರೂಲ್ ಬ್ರಿಟಾನ್ಯ', 'ಜೆರೂಸೆಲಮ್' ಇವು ಅಂದು ಹಾಡುವ ಅತ್ಯಂತ ಜನಪ್ರಿಯ ಗೀತೆಗಳು. ವಿಲಿಯಮ್ ಬ್ಲೇಕ್ ರಚಿಸಿದ ಈ ಗೀತೆಯ ತಾತ್ಪರ್ಯ ಹೀಗಿದೆ. ನಮ್ಮ ಈ ಹಸಿರು ನೆಲದಲ್ಲಿ ನಾವೆಲ್ಲಾ ಒಟ್ಟುಗೂಡಿ ಜೆರೂಸೆಲಮ್ ತರಹದ ರಾಮರಾಜ್ಯವನ್ನು ಕಟ್ಟೋಣ ಎಂಬ ಅರ್ಥ ಬರುವ ಈ ಹಾಡನ್ನು ಹಾಡುವಾಗ ಹಲವು ಹಿರಿಯ ಪ್ರಜೆಗಳು ಭಾವಪರವಶರಾಗಿ ಮಕ್ಕಳಂತೆ ಅತ್ತುಬಿಡುವುದನ್ನು ನಾನೇ ನೋಡಿದ್ದೇನೆ. ನಮ್ಮ ನಾಡಿನಲ್ಲೂ ದೇಶಭಕ್ತಿ ಗೀತೆಗಳನ್ನು ಈ ರೀತಿ ಸಮೂಹಗಾನಕ್ಕೆ ಪ್ರಚೋದಿಸಿದರೆ ಎಷ್ಟು ಚೆನ್ನ ಅನ್ನಿಸುತ್ತದೆ. ಡಿಸಂಬರ್ ಇಪ್ಪತ್ತೈದರಂದು ಹೇಗಿದ್ದರೂ ಹಾಸ್ಯೋತ್ಸವಕ್ಕೆ ನಾವೆಲ್ಲಾ ಸೇರುತ್ತೇವೆ. ಕಾರ್ಯಕ್ರಮದ ಪ್ರಾರಂಭದಲ್ಲಿ ನಾವೆಲ್ಲರೂ ಸೇರಿ ಒಕ್ಕೊರಲಿನಲ್ಲಿ ಯೊವುದಾದರೊಂದೆರಡು ದೇಶಭಕ್ತಿ ಗೀತೆಗಳನ್ನು ಏಕೆ ಹಾಡಬಾರದು?. ಪೂರ್ಣ ಸಾಹಿತ್ಯ ಗೊತ್ತಿಲ್ಲದವರ ಅನುಕೂಲಕ್ಕೆ ಬೇಕೆಂದರೆ ಸಾಹಿತ್ಯ ಅಚ್ಚಿಸಿರುವ ಕರಪತ್ರಗಳನ್ನು ಎಲ್ಲರಿಗೂ ಹಂಚೋಣ. ಬನ್ನಿ, ಎಲ್ಲ ಸೇರಿ ಸಮೂಹಗಾನದ ಪರಂಪರೆಯನ್ನು ಪ್ರಾರಂಭಿಸೋಣ.

ಕೊರವಂಜಿ ಅಪರಂಜಿ ಟ್ರಸ್ಟ್ ಸಾದರಪಡಿಸುವ

ಹಾಸ್ಯ ಸಾಹಿತಿ ಶ್ರೀಮತಿ ಟಿ. ಸುನಂದಮ್ಮ

ನೆನಪಿನ ಹಾಸ್ಯೋತ್ಸವ

ಸೋಮವಾರ, 25-12-2006 ಎಚ್.ಎಸ್. ಕಲಾಕ್ಷೇತ್ರ, ಜಯನಗರ, ಬೆಂಗಳೂರು - ಬೆಳಗ್ಗೆ 10.00 ಗಂಟೆಯಿಂದ

ಹಾಸ್ಯೋತ್ಸವ ಚಾಲನೆ	: ಶ್ರೀ ರವಿ ಬೆಳಗೆರೆ
ಸುನಂದಮ್ಮನವರ ನೆನಪು	: ಶ್ರೀಮತಿ ಭುವನೇಶ್ವರಿ ಹೆಗಡೆ
ಅಭಿನಂದನೆ	: ಶ್ರೀಮತಿ ಸುಗ್ಗೇಹಳ್ಳಿ ಪಂಕಜ
ಅಭಿನಂದಿಸಿ ಶುಭ ಕೋರುವವರು	: ಡಾ॥ ಮಾಸ್ಟರ್ ಹಿರಣ್ಣಯ್ಯ
ಹಾಸ್ಯಗೀತ ಮಾಧುರ್ಯ	: ಪ್ರೊ. ಎಂ. ಕೃಷ್ಣೇಗೌಡ
ಮ್ಯಾಜಿಕ್ ಮೊಮೆಂಟ್ಸ್	: ಶ್ರೀ ಮಂಜುನಾಥ ಹಿರೇಮಠ
ಅಮೆರಿಕ ಹಾಸ್ಯಾನುಭವಗಳು	: ಪ್ರೊ. ಎಚ್.ಕೆ. ನಂಜುಂಡಸ್ವಾಮಿ
ಅಣಕುರಾಗ	: ಎನ್. ರಾಮನಾಥ್
ಹಾಸ್ಯಾಭರಣ	: ಪ್ರೊ. ಎಚ್.ಎಸ್. ಲಕ್ಷ್ಮೀನಾರಾಯಣ ಭಟ್
ಹಾಸ್ಯಾನಂದ	: ಮೈಸೂರು ಆನಂದ್


ಜೊತೆಗೆ ಎಂ.ಆರ್. ಸುಬ್ಬರಾಮ್ ಅವರ ಗಾನವಿನೋದಿನಿ ತಂಡದಿಂದ ಇಡೀದಿನ ಸಮೃದ್ಧ ಹಾಸ್ಯಧಾರೆ

ಎಲ್ಲರಿಗೂ ಸುಸ್ವಾಗತ

ಉಸ್ತುವಾರಿ: ಅ.ರಾ. ಮಿತ್ರ

ಕೆ. ಶ್ರೀನಿವಾಸ
ಸಂಚಾಲಕರು

ಬೇಲೂರು ರಾಮಮೂರ್ತಿ
ಸಂಚಾಲಕರು



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

– ಬಾಗೂರು ಚಂದ್ರು

ಕೊರವಂಜಿಯ ಕಾಲದಿಂದ ನನಗೆ ದಾಶರಥಿ ದೀಕ್ಷಿತ್ ಬಗೆಗೆ ವಿಶೇಷ ಮಮತೆ. ಇದಕ್ಕೆ ಕಾರಣ ದಫೇದಾರ್ ದೇರಣ್ಣನವರ ಪತ್ನಿ ಸಾಂವತ್ರಿಯ ತೌರೂರು ನಾನು ಬೆಳೆದ ಬಾಗೂರು! ಹಳ್ಳಿಗಳು ಇನ್ನೂ ಗ್ಲೋಬಲ್ ವಿಲೇಜ್‌ಗಳಾಗಿಲ್ಲದ ಆ ದಿನಗಳಲ್ಲಿ ನನ್ನ ಊರಿನ ಹೆಸರನ್ನು ಬೆಂಗಳೂರಿನ ಪತ್ರಿಕೆಯಲ್ಲಿ ಓದುವುದೇ ನನಗೆ ಒಂದು ತರಹದ ಥ್ರಿಲ್.

ದಾಶರಥಿ ದೀಕ್ಷಿತ್ ಕೊರವಂಜಿಯ ಪೂರ್ವದಲ್ಲಿಯೇ ನಗೆಬರಹಗಳನ್ನು ಬರೆಯುತ್ತಿದ್ದವರು. ಅವರ ಮೊದಲ ಹಾಸ್ಯ ಸಂಕಲನ ಪ್ರಕಟವಾದದ್ದು 1943ರಲ್ಲಂತೆ. ಮುಂದೆ ದೀಕ್ಷಿತ್ ಕೊರವಂಜಿ ಬಳಗ ಸೇರಿದರು, ನೂರಾರು ಲೇಖನಗಳನ್ನು ಬರೆದರು. ಹಾಸ್ಯ ಬರಹಗಾರರಲ್ಲಿ ದೀಕ್ಷಿತ್ ಹಲವು ರೀತಿಯಲ್ಲಿ ಅನನ್ಯ. ಮಹಾಮಹೋಪಾಧ್ಯಾಯ ಆರ್ ನರಸಿಂಹಾಚಾರ್ಯರು ನೂರು ವರ್ಷಗಳ ಹಿಂದೆ ದಾಖಲಿಸಿದ್ದ ಗಾಂಪಗುರುಗಳ ಸಾಹಸಗಾಥೆಗಳನ್ನು ದೀಕ್ಷಿತ್ ಮುಂದುವರಿಸಿದರು. ಧರಣಿಮಂಡಲ ಕರ್ನಾಟಕಕ್ಕೆ ಸೀಮೀತವಾಗಿದ್ದ ಗುರುಗಳ ಕಾರ್ಯಕ್ಷೇತ್ರವನ್ನು ದೀಕ್ಷಿತ್ ಸೂರ್ಯ ಮುಳುಗದ ಸಾಮ್ರಾಜ್ಯದ ರಾಜಧಾನಿ ಲಂಡನ್ನಿಗೂ ವಿಸ್ತರಿಸಿದರು. ಹಳದಿ ತಗಡಿನ ಟ್ರಂಕ್ ಮತ್ತು ಪಟಾಪಟಿ ಜಮಾಖಾನದಲ್ಲಿ ಕಟ್ಟಿದ್ದ ಹಾಸಿಗೆಯೊಡನೆ ಅಂತರಾಷ್ಟ್ರೀಯ ವಿಮಾನಯಾನ ಮಾಡಿದ್ದು ನಮ್ಮ ಹಾಸ್ಯಸಾಹಿತ್ಯದಲ್ಲಿ ಮರೆಯಲಾರದ ಘಟನೆ.

ದೀಕ್ಷಿತರು ಹಾಸ್ಯಲೇಖಕರಾಗಿ ಪಡೆದಷ್ಟೇ ಪ್ರಸಿದ್ಧಿ ನಾಟಕಕಾರರಾಗಿಯೂ ಪಡೆದಿದ್ದಾರೆ. ಅವರ ಅಳಿಯ ದೇವರು ಕನ್ನಡದಲ್ಲಿ ಅತ್ಯಂತ ಜನಪ್ರಿಯ ಹಾಗೂ ಅತಿ ಹೆಚ್ಚು ಬಾರಿ ಪ್ರದರ್ಶಿತ ನಾಟಕಗಳಲ್ಲಿ ಒಂದು. ಅಳಿಯ ನವಗ್ರಹಗಳ ಜೊತೆಗೆ ಕಾಡುವ ಹತ್ತನೆಯ ಗ್ರಹ ಎಂದು ಸಂಸ್ಕೃತ ವಿದ್ವಾಂಸರು ಹೇಳಿದ್ದಾರಂತೆ. ಈ ಹತ್ತಕ್ಕೆ ಹನ್ನೊಂದು ಹನ್ನೆರಡನೆ ಗ್ರಹಗಳನ್ನು ಸೇರಿಸಿ ಅತಿ ಪರಿಣಿತ ಹೋರಾರತ್ನ ವಿದ್ವಾಂಸರೂ ಬಿಡಿಸಲು ಸಾಧ್ಯವಿಲ್ಲದ ಗ್ರಹಗಳ ಗೊಂದಲವನ್ನು ಸೃಷ್ಟಿಸಿದ್ದು ದೀಕ್ಷಿತರ ಹೆಗ್ಗಳಿಕೆ.

ದೀಕ್ಷಿತರ ಹಳೆಯ ಬರಹಗಳು ನಮಗೆ ಓದಲು ಲಭ್ಯವಿಲ್ಲ. ಅವರ ಆಯ್ದ ನಗೆಬರಹಗಳನ್ನು ವೈ.ಎನ್. ಗುಂಡೂರಾವ್ ಸಂಪಾದಿಸಿದ್ದಾರೆ. ಈ ಬೆಸ್ಟ್ ಆಫ್ ದೀಕ್ಷಿತರ ಸಂಕಲನದಲ್ಲಿನ ಬೆಸ್ಟ್ ಲೇಖನ ಇಲ್ಲಿ ಕೊಟ್ಟಿರುವ ಅನ್ನದಾತರು ಎಂದು ನನ್ನ ನಂಬಿಕೆ. ಇಲ್ಲಿಯ ಅನ್ನದಾತ ಕೈಗಾರಿಕಾ ನಗರಿ ಬೆಂಗಳೂರಿನಲ್ಲಿ ಎಲ್ಲೆಲ್ಲೂ ಕಾಣಸುತ್ತಿದ್ದ, ಆದರೆ ಐಟಿಬಿಟಿಗಳ ಬೆಂಗಳೂರಿನಲ್ಲಿ ನಶಿಸಿಹೋಗಿರುವ, ಮುಂಬೈ ಭಾಷೆಯ ಡಬ್ಬಾವಾಲ. ಮುಂಬೈ ಡಬ್ಬಾವಾಲಗಳ ಅದ್ಭುತ ಕಾರ್ಯ ವೈಖರಿ ನೋಡಿ (ಜಗತ್ತಿನ ಅತಿ ಮುದಿ ಯುವರಾಜ) ಚಾರಲ್ಸ್ ವಿಸ್ಮಯ ಪಟ್ಟಿದ್ದನಂತೆ. ಬೆಂಗಳೂರಿನ ಆ ದಿನಗಳ ಡಬ್ಬಾವಾಲಗಳಿಗೆ ದೀಕ್ಷಿತ್ ಈ ಲೇಖನದಲ್ಲಿ ಅತ್ಯಂತ ಅಂತಃಕರಣಪೂರಿತ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ಅನ್ನದಾತ

– ದಾಶರಥಿ ದೀಕ್ಷಿತ್

ಅವನಿಗೆ ಅನ್ನದಾತ ಎಂದೇ ನಾನು ಕರೆಯುತ್ತಿದ್ದುದು. ಅನೇಕ ವರ್ಷಗಳಿಂದ ಮನೆಯಿಂದ ಕಳಿಸಿದ ಊಟದ ಡಬ್ಬಿಯನ್ನು ಸೈಕಲ್ಲಿಗೆ ತಗುಲಿಹಾಕಿಕೊಂಡು, ಹತ್ತು ಮೈಲಿ ದೂರದ ನಾನು ಕೆಲಸ ಮಾಡುತ್ತಿದ್ದ ಕಂಪನಿಗೆ ಊಟದ ಸಮಯಕ್ಕೆ ಸರಿಯಾಗಿ ತಂದುಕೊಡಬೇಕು. ಮೂರು ರೂಪಾಯಿಯಿಂದ ಪ್ರಾರಂಭವಾಗಿ ಇವತ್ತಿಗೆ ನಾಲ್ಕೂವರೆ ಕೊಡುತ್ತಿದ್ದೇನೆ.

ಈ ಅನ್ನದಾತ ತಮ್ಮಯ್ಯನ ಮೇಲೆ ನನಗೆ ಕಡುಕೋಪ ಬಂದಿತ್ತು. ನನ್ನ ಮೂರನೆಯ ಟಿಫಿನ್ ಕ್ಯಾರಿಯರ್ ಕಳೆದುಬಿಟ್ಟಿದ್ದಾನೆ. ಈ ಮನೆ ಯಜಮಾನ್ತಿಗೆ ಅವನ ಮೇಲೆ ಏನೋ ಕನಿಕರ. ''ಶಾನೆ ದಿವ್ಸದಿಂದ ತಂದುಕೊಡ್ತಿದ್ದಾನೆ ನಂಬಿಕಸ್ತ – ಏನೋ ಅಚಾತುರ್ಯವಾಗಿದೆ ಹೋಗಲಿ ಬಿಡಿ ಪಾಪ'' ಎಂದು ಸಮಾಧಾನ ಹೇಳಿದ್ದಳು. ಆದರೆ ನನ್ನ ನಿರ್ಧಾರ ನಿಶ್ಚಲವಾಗಿತ್ತು. ಈ ಮಕ್ಕಳಿಗೆ ಸರಿಯಾಗಿ ಬುದ್ಧಿ ಕಲಿಸಬೇಕು.

''ಅವನ್ನ ಮನೆ ಗೇಟಿನ ಹತ್ರ ಸೇರಿಸಬ್ಯಾಡ ತಿಳೀತೇ. ಇದು ಸುಗ್ರೀವಾಜ್ಞೆ, ಅವನ್ನ ಕೆಲಸದಿಂದ ಡಿಸ್‌ಮಿಸ್ ಮಾಡಲಾಗಿದೆ – ರಿಪೀಟ್ – ಅವನ್ನ ಕೆಲಸದಿಂದ ಡಿಸ್‌ಮಿಸ್ ಮಾಡಲಾಗಿದೆ...''

''ನಿಮ್ಮ ಕೋಪ ನಿಮಗೇ ಊಟಕ್ಕೆ ತೊಂದರೆ ಮಾಡಲ್ಲವೇ?''

''ಮಾಡಲಿ... ನಾನು ಕ್ಯಾಂಟೀನಿನಲ್ಲೇ ಊಟ ಮಾಡ್ತೀನೇ''

''ಕ್ಯಾಂಟೀನ್ ಊಟ ಸರಿಹೋಗಲ್ಲ, ಬ್ಲಡ್‌ಪ್ರೆಶರ್ ಹೆಚ್ಚುತ್ತೆ... ರೇಗಾಡೋದು ಇನ್ನೂ ಹೆಚ್ಚುತ್ತೆ...''

''ಹೆಚ್ಚಲಿ... ಇನ್ನೂ ರೇಗಾಡ್ತೀನಿ... ಆದರೆ ಈ ಪಾಟಿ ಊಟದ ಡಬ್ಬಿಗಳನ್ನು ಕಳೆಯೋ ತಮ್ಮಯ್ಯನನ್ನ ಮನೆ ಅಂಗಳದಲ್ಲಿ ಕಾಲಿಡಕೂಡದು... ಇವನ ಸಹವಾಸ ಸಾಕು...''

''ಬಿಡಿ... ನನಗೆ ಇನ್ನು ಹೇಳೋದು ಸಾಧ್ಯವಿಲ್ಲ... ಈಗ ನೂರು ಸಲ ಹೀಗೇ ಬ್ಯಾಡ ಇವನು ಅಂತ ಬಿಡಿಸಿದ್ದಾಗಿದೆ... ಇದು ನೂರಾ ಒಂದನೇ ಸಲ ಅಷ್ಟೆ...''

''ಇಷ್ಟಕ್ಕೂ ನಿನಗೇ ಅನುಕೂಲ ಆಯ್ತಲ್ಲೇ... ಹನ್ನೊಂದು ಮುಕ್ಕಾಲಿಗೆ ತರೋ ಊಟಕ್ಕೆ ಒಂಬತ್ತು ಗಂಟೆಗೇ ಗಣಗಣಗಣ ಅಂತ ದ್ವಿಚಕ್ರಧಾರಿಯಾಗಿ ಬಂದು ನಿಂತುಬಿಡ್ತಾನಲ್ಲ... ಅಷ್ಟು ಹೊತ್ತಿಗೇ ಬೇಯಿಸೋದು ತಪ್ಪು.''

''ಹ್ಯಾಗೂ ಹುಡುಗರು ಸ್ಕೂಲಿಗೆ ಹೋಗೋ ಹೊತ್ತಿಗೆ ಅಡಿಗೆ ಮಾಡಲೇಬೇಕಲ್ಲಾ... ಇನ್ನೊಂದರ್ಧ ಘಂಟೆ ಮುಂಚೆ ಎಸರಿಗಿಟ್ಟರಾಯ್ತು... ಇಷ್ಟು ವರ್ಷ ಮಾಡಲಿಲ್ಲವೇ...''

''ನೀನು ಸುಮ್ಮನಿದ್ದುಬಿಡು... ಇವರುಗಳಿಗೆ ಸರಿಯಾದ ಪಾಠ ಕಲಿಸಬೇಕು. ಒಂದಲ್ಲ ಎರಡಲ್ಲ ಮೂರು ಕ್ಯಾರಿಯರ್ರು... ನನ್ನಿಂದ ಸಾಧ್ಯವಿಲ್ಲ ಸಪ್ಲೈ ಮಾಡೋಕ್ಕೆ.''

ರೋಸಿ ಹೋಗಿತ್ತು ಈ ಅನ್ನದಾತ ತಮ್ಮಯ್ಯನ ಸಹವಾಸ. ಎಂಟು ದಿನ ಕ್ಯಾಂಟೀನಿನಲ್ಲೇ ಕ್ಯೂ ನಿಂತು ಗುಂಪಿನಲ್ಲಿ ಉಂಡು ತೇಗಿದ್ದೆ. ಸಿಟ್ಟು ಕಡಿಮೆ ಆಗಿತ್ತು. ನಮ್ಮ ಫ್ಯಾಕ್ಟರಿ ಕ್ಯಾಂಟೀನ್ ಊಟ ತಿಂದರೆ ಬ್ಲಡ್ ಪ್ರೆಶರ್ ಕಡಿಮೆ ಆಗಿ ಸಿಟ್ಟು ಇಳಿಯುತ್ತೇಂತ ಕಾಣುತ್ತೆ. ಇರಬೇಕು, ಆ ಊಟದಲ್ಲಿ ಉಪ್ಪು, ಹುಳಿ ಖಾರ ಏನಾದರೂ ಇದ್ದರಲ್ಲವೇ! ಮಧ್ಯಾಹ್ನದ ಊಟ ಸರಿಯಾಗಿ ಬೀಳದಿದ್ದರೆ ನಾನು ಮನುಷ್ಯನೇ ಅಲ್ಲ.

ಅಂದು ಭಾನುವಾರ. ಮನೆಯಲ್ಲೇ ಮಧ್ಯಾಹ್ನ ರುಚಿ ರುಚಿಯಾಗಿ ಅಡಿಗೆ ಮಾಡಿಸಿ ಊಟ ಮಾಡಬೇಕೆಂದು ಹಸಿದು ಕೂತಿದ್ದೆ. 'ನಮಸ್ಕಾರ ಅಯ್ಯನೋರಿಗೆ.'

ಕ್ಯಾರಿಯರ್ ಕೊಂಡೊಯ್ಯುವ ತಮ್ಮಯ್ಯ, ನಾನು ಡಿಸ್‌ಮಿಸ್ ಮಾಡಿದ ಆಸಾಮಿ ಬಂದು ನಿಂತಿದ್ದ. ಮಾಜಿ ನೌಕರನ ಹತ್ತಿರ ಮಾಲಿಕನದೇನು ಮಾತು. ಸ್ಟೀಲ್ ಕ್ಯಾರಿಯರ್ ಕಳೆದ ಈತನನ್ನು ಪೋಲೀಸರು ನೋಡುವಂತೆ ದುರುದುರು ನೋಡಿದೆ.

''ಅಮ್ಮಾ ಅವರು ಮನ್ಯಾಗೌರಾ'' ಎಂದು ಪ್ರಶ್ನಿಸಿದ. ನಾನು ಮಾತಾಡಲಿಲ್ಲ. ತಿರಸ್ಕಾರದಿಂದ ಮೂತಿ ತಿರುವಿದೆ. ಊಟದ ತಮ್ಮಯ್ಯ ಕೂಗಿದ ''ಅಮ್ಮಾ ತಾಯಿ ರವಷ್ಟು ಬನ್ನಿ. ನಾನು ತಮ್ಮಯ್ಯ ಬಂದಿವ್ನಿ...'' ಎಂದು ಗಟ್ಟಿಯಾಗಿ ಮನೆ ಯಜಮಾನ್ತಿಯನ್ನು ಕರೆದ. ಆಕೆ ಸೆರಗಿಗೆ ಕೈ ಒರೆಸಿಕೊಳ್ಳುತ್ತಾ ಬಂದರು. ಇವನು ಬಾಗಿಲ ಹತ್ರ ಕೂತ.

''ಏನಪ್ಪಾ, ಕ್ಯಾರಿಯರ್ ಸಿಕ್ತೇ? ಇವರು ನೋಡು ಕ್ಯಾಂಟೀನ್ ಊಟ ಮಾಡಿ ಹ್ಯಾಗೆ ಆಗಿದ್ದಾರೆ...''

ಈ ಮಾತಾಡಿದ ಕೂಡ್ಲೇ ತಮ್ಮಯ್ಯನಿಗೆ ರೇಗಿಹೋಯ್ತು. ಗಟ್ಟಿಯಾಗಿ ಬೈಯತೊಡಗಿದ.

''ಸಿಗ್ತದೆ ಆ ಕಳ್ಳ ಬಡ್ಡೀಮಗ ಇದಾನಲ್ಲಾ ನನ್ನ ಅಸಿಸ್ಟೆಂಟು ಅಂಜನಿ... ಅವನ್ನ ಕಂಡರೆ ಹಂಗೆ ಅಂಗಾರ್ ಆಯ್ತದೆ ತಗಳ್ಳಿ... ಈಗ ಅವನ್ನ ನುಗ್ಗೆ ಮರಕ್ಕೆ ಕಟ್ಟಾಕಿ, ಹುಣಸೇ ಬರ್ಲಿನಾಗೆ ಚರ್ಮ ಸುಲಿಯೋ ಹಂಗೆ ಬಡದು ಅವನ ತಲೆತಾವ ಕೆಂಜಗ - ಕರೇ ಕಟ್ಟಿರುವೆ ಗ್ಯಾಂಗು ಬಿಟ್ಟವಿನಿ ತಾಯಿ... ಚಮ್ಡ ಸುಲ್ದು ಉಪ್ಪುಕಾರ ತುಂಬಿ ಟಾರ್ ರಸ್ತೆ ಮ್ಯಾಗೆ ಉಲ್ಲಾಡಿಸಬೇಕು ಲೌಡಿ ಮಗನ್ನ....

ಅಂಜನಿ ಇವನ ಅಸಿಸ್ಟೆಂಟು; ಅವನೇ ಅಂತೆ ಕ್ಯಾರಿಯರ್ ಕಳೆದವನು. ಅವನ ಮೇಲೆ ಯದ್ವಾತದ್ವಾ ರೇಗಿದ್ದ.

''... ಪಾಪ, ಅವನಿಗ್ಯಾಕೆ ಬೈತೀ ತಮ್ಮಯ್ಯ - ಬಂಗಾರದಂತ ಹುಡುಗ - ಅನ್ನ ಉಮ್ಮುಗೊಯ್ತಾ ಇದೆ ಕೊಂಚ ಇರಪ್ಪ ಅಂದ್ರೆ ಕಾಯ್ತಾನೆ - ಎಷ್ಟು ನಯವಾದ ಮಾತು...''

ಇವಳು ನಿತ್ಯ ಊಟ ತರಲು ಬರುತ್ತಿದ್ದ ಅಂಜನಿಯನ್ನು ತಾರೀಫ್ ಮಾಡಿದಳು. ಆದರೆ ತಮ್ಮಯ್ಯನಿಗೆ ಇದು ಸಹಿಸಲಿಲ್ಲ.

''ಟೈಟ್ ಪ್ಯಾಂಟ್ ಆಕ್ಕೊಂಡು - ಬಣ್ಣದ ಷಲ್ಟು, ಕೆನ್ನೆಮ್ಯಾಗೆ ಮೂರು ಮೊಳ ಜೊಂಪೆ ಕೂದ್ಲು ಬಿಟ್ಗಂಡು - ಬತ್ತಾನೆ ನೋಡಿ ನಿಮಗೆ ಚಂದಾಗೆ ಕಂಡಿದಾನೆ... ಅಲ್ಕ ನನ್ನ ಮಗ,

ನಿಯತ್ತಿಲ್ಲಮ್ಮಾ - ಸ್ವಾಮೇರ ಕ್ಯಾರಿಯರ್ ಕದಿಯಾನಾಂದ್ರೆಸು - ಮೈಮ್ಯಾಗೆ ಎಚ್ಚರ ಬ್ಯಾಡವಾ... ಜೇಲಿಗೆ ಆಕಿಸಿಬಿಡ್ತೀನಿ ಅವನ್ನ...''

''ಪಾಪ ಅವನೇನು ಮಾಡ್ತಾನೆ ವಾಪಸು ಮನೆಗೆ ಕೊಡ್ಲಿಕ್ಕೇ ಮರದ ಕೆಳಗೆ ಜೋಡಸ್ತಾ ಇದ್ದಾಗ ಹಿಂಗೆ ನೋಡ್ದೋದ್ರಲ್ಲಿ ಹಂಗೆ ಮಂಗಮಾಯ ಆಯ್ತು ಅಂತ ಅತ್ಕೊಂಡ ಪಾಪ.''

''ಅವನಿಗೆ ಪಾಪ ಅಂತ ಅನ್ನಬ್ಯಾಡಿ ಅಮ್ಮಯ್ಯ. ತರೋ ನಲವತ್ತು ಊಟದಾಗ ನಲವತ್ತು ತಿಂಗಳ್ಗೂ ಒಬ್ಬೊಬ್ರ ಕ್ಯಾರಿಯರ್ ಕಳೆದರೆ, ಮತ್ತೆ ನಿಮ್ಮ ಮನೆ ಚಾನ್ಸು ಬರಾದು ಮೂರುಕಾಲು ವರ್ಷಕ್ಕೆ ಅಲ್ಲವಾ... ಹಿಂಗೆ ಯಾಮಾರ್ಸಿಕಂಡು ಬತ್ತಾ ಅವನೆ. ಅವನ್ನ ನಂಬಾದೆ ಬ್ಯಾಡೇಳ್ರಿ...''

ಆ ಅಂಜನೀನ ಬೈದೇ ಬೈದ ತಮ್ಮಯ್ಯ. ಇವಳು ಅವನ್ನ ಹೊಗಳೇ ಹೊಗಳಿದಳು. ಆದರೆ ನಡುವೆ ಸ್ಟೀಲ್ ಕ್ಯಾರಿಯರ್ ಕಳಕೊಂಡ ನಾನು ಕ್ಯಾಂಟೀನ್ ಊಟದ ಶಿಕ್ಷೆಗೆ ಸಿಕ್ಕು ನರಳುವವನ ಪಾಡೇನು ಅಂತ ಇವಳು ಚಿಂತಿಸಬ್ಯಾಡವೆ!

ತಮ್ಮಯ್ಯ ಒಮ್ಮೆಲೇ ದುಃಖಿತನಾದ. ಕಣ್ಣಲ್ಲಿ ನೀರು ಬರೋದೊಂದೆ ಬಾಕಿ. ಕಂಠ ಗದ್ಗದವಾಯಿತು. ಹೋದವರನ್ನು ಹೊಗಳಿ ಹೊಗಳಿ ಅಳುವವರಂತೆ ತೀರಿಹೋದ ಕ್ಯಾರಿಯರ್ ವರ್ಣಿಸಿ ದುಃಖಿಸತೊಡಗಿದ.

''ಅಮ್ಮಾ... ಅಯ್ಯಾ ಅವರ ಮೊದಲ್ನೇ ಕ್ಯಾರಿಯರ್ ನೆನಿಸ್ಕಂಡ್ರೆ ಬಲು ದುಃಖ ಆಯ್ತದೆ - ಆಗತಾನೇ ಒಸಾ ಸಂಸಾರ ಅಲ್ಲವರ, ನಿಮ್ಮದು... ಅಂಗೈ ದಪ್ಪದ ತಗಡಿಂದು - ನಾಲ್ಕು ಬಟ್ಟಲು ಫಳಫಳ ಹೊಳೆಯೋ ಹಂಗೆ ನೀವು ತೊಳೆದು ಊಟಾ ತುಂಬಿಕೊಟ್ರೆ ತಗಂಡು ಓಗಾಕೇ ಕುಸಿ ಆಗಾದು.... ನಿಮ್ಮ ಲಗ್ನದಾಗೆ ನಿಮ್ಮ ಅಪ್ಪ ಅವರು ಅಳಯಂಗೆ ಕೊಟ್ಟಿದ್ದಲ್ಲವರಾ ಅದೂ... ಹೋಗೆಬುಡ್ತಲ್ಲಾ...''

ನನ್ನ ಮೊದಲನೇ ಕ್ಯಾರಿಯರ್ ನೆನೆದು ಅಳ್ತಿದಾನೆ ಭಡವ. ಅದೂ ನಾನು ದುಡ್ಡು ಕೊಟ್ಟಿದ್ದಲ್ಲ, ಹೆಂಡ್ತಿ ಜೊತೆಗೇ ಬಂದದ್ದು ಅಂತ ಕುಕ್ಕಿ ಬೇರೆ ಮಾತಾಡ್ತಿದ್ದಾನೆ.

''ಹೌದು ತಮ್ಮಯ್ಯ - ಅದನ್ನ ನೀನೇ ಕಳೆದದ್ದು ಅಲ್ಲವಾ?''

''ಬೆಂಡೆತ್ತಿ ಬಿಡಬೇಕು ಆ ಸುವರ್‌ನ. ನನ್ನ ಅಸಿಸ್ಟೆಂಟ್ ಅಂಜನಿ. ಅಂಜನಿ ಅವನ ಅಣ್ಣ ಅಸ್ವತ್ಥ ಕಳೆದದ್ದು, ಅವನ ಕೆಲಸದಿಂದ ಡಿಸ್‌ಮಿಸ್ ಮಾಡಿಬುಟ್ಟೆ.''

''ಈಗೆಲ್ಲಿ ಅವನು?... ಐ.ಟಿ.ಐ. ಸೇರ್ಕಂಡವನೆ ಆ ನನಮಗಾ ನಂತಾವಾಗೇ ಊಟ ತರಿಸ್ಕಂತವನೆ - ಚಂದಾಗಿದಾನೆ. ಇರ್ಲಿಬುಡಿ - ಆದ್ರೆ ಬಲು ಧಿಮಾಕು''

ಈ ಕ್ಯಾರಿಯರ್ ತಂದುಕೊಡೋ ತಮ್ಮಯ್ಯನ ಪುರಾಣ ಎಲ್ಲೆಲ್ಲಿಗೋ ಅವನ ಸೈಕಲ್ ಹೋದಹಾಗೇ ಹೊರಡುತ್ತಿತ್ತು. ನನಗೆ ಇವನು ಮನೆಗೆ ಬರೋದೇ ಬೇಕಾಗಿರಲಿಲ್ಲ. ಡಿಸ್‌ಮಿಸ್ ಮಾಡಿದ ಮೇಲೆ ಈ ಮಾಜಿ ನೌಕರನಿಗೂ ನನಗೂ ಏನು ಸಂಬಂಧ?

''ಭಾನುವಾರ ಹಾಯಾಗಿ ಇರೋಣ ಅಂದ್ರೆ ಇವನ ಹತ್ರ ಏನು ತಲೆಹರಟೆ. ನಮ್ಮನೆ ಹತ್ರ ಇವನು ಯಾಕೆ ಬಂದ. ನನಗೆ ರೇಗಿದರೆ ಪೊಲೀಸ್ ಇನ್ಸ್‌ಪೆಕ್ಟರ್ ಶಿವಣ್ಣನಿಗೆ ಹೇಳಿ

ಲಾಕಪ್‌ನಲ್ಲಿ ಕೂಡಿ - ಮೂರು ಸ್ಟೀಲ್ ಕ್ಯಾರಿಯರ್ ಕಳೆದದ್ದಕ್ಕೆ ತಕ್ಕ ಶಿಕ್ಷೆ ಮಾಡಿಸಬೇಕು ಅಷ್ಟೆ...''

... ರೇಗಿದ್ದೆ, ಆದರೆ ತಮ್ಮಯ್ಯ ನಾನು ಆಡಿದ ಮಾತು-ರೇಗಿದ ರೀತಿ-ಬೆದರಿಸಿದ ಬಗೆ-ಇವು ಯಾವುದಕ್ಕೂ ಕೇರ್ ಮಡಗಿದ ಹಾಗೆ ಕಾಣಲಿಲ್ಲ. ಅವನನ್ನೇ ನೋಡಿದೆ. ಉಕ್ಕಿನ ತಂತಿಯಂತಹ ದೇಹ, ಸೈಕಲ್ ತುಳಿದು ತುಳಿದು ಸ್ಟೇನ್‌ಲೆಸ್ ಸ್ಟೀಲ್‌ನಂತಹ ಎರಕ ಹುಯ್ದಂತಹ ಮೀನಖಂಡ-ಉಬ್ಬಿದ ನರಗಳು-ತೀಕ್ಷ್ಣವಾದ, ಆಳವಾದ ಹೊಳಪಿನ ಕಣ್ಣು-ಬಿಳಿ ಕರಿಮಿಶ್ರಿತ ಮೀಸೆ-ಗರುಡ ಮೂಗು, ತಲೆಗೆ ಪಪ್ಪಳಿ ಟವೆಲು ಸುತ್ತಿದ್ದಾನೆ. ಕೈಗೆ ಗಡಿಯಾರ ಕಟ್ಟಿದ್ದಾನೆ. ಕಾಕಿ ನಿಕ್ಕರು ಟೆರಿಲಿನ್ ಷರಟು - ಕಿವಿಗೆ ಖಡಕು. ಅವಳ ಹತ್ರಾನೆ ಇವನ ಹರಟೆ.

''ನನ್ನ ಮಾತು ಕೇಳ್ಕಳ್ಳಿ ಅಮ್ಮಾ ಅಂಜನಿ ಅವನಲ್ಲಾ... ಬಲ್ ಕಿಲಾಡಿ ಕೆಲ್ಸಗಾರ. ಬನಶಂಕ್ರೀ ಮನೆ ಶುರುಹಚ್ಕಂಡು, ಜಯನಗರ ಮುಗಿಸ್ಕಂಡು, 40 ಊಟ... ಅಮ್ಮಾ ಅವನು ಟಿಫಿನ್ ಕ್ಯಾರಿಯರ್ ಜೋಡ್ಸೋದು ನೋಡಾಕೆ ಬಲು ಚೆಂದ. ಒಂದೊಂದು ಕ್ಯಾರಿಯರ್‍ದು ಒಂದೊಂದು ತೂಕ. ಹಿಂದ್ಗಡೆ ಸೈಕಲ್ ಕ್ಯಾರಿಯರ್ ಮ್ಯಾಲೆ ಇಪ್ಪತ್ತು ಊಟ, ಯ್ಯಾಂಡಲ್ ಮೇಲೆ ಆ ಕಡೆ ಈ ಕಡೆ ಹತ್ತು ಹತ್ತು ಊಟ... ಬ್ಯಾಲೆನ್ಸ್ ಮಾಡಿ ಜೋಡಿಸ್ಕಾಬೇಕಾಲ್ಲವರಾ... ಸುಮ್ಕೆ ಕುರ್ಚಿ ಮ್ಯಾಲೆ ಕೂತ್ಕಂಡು ಮೂರು ಕಾಗದ ರುಜುಹಾಕಿ ಮೂವತ್ತು ಜನ ಕೈಕೆಳಗಿನವನ್ನು ಗದರಿಸಿಕೊಂಡು ವಾಪಸ್ ಮನೀಗೆ ಬರೋ ಕೆಲಸವಾ ಇದು. ಕಷ್ಟ ಬೀಳ್ತೀವಿ ತಾಯೀ... ನಮ್ಮ ಅಂಜನಿ ಜೋಡಿಸ್ದಂಗೆ ಕ್ಯಾರಿಯರ್ ಬ್ಯಾಲೆನ್ಸ್ ಮಾಡ್ಕಂಡು ಒಂದಿನಾ ಊಟ ತರ್ಲಿ ಆ ಆಹಾರ ಮಂತ್ರಿಗಳು ನೋಡಾನ... ಬ್ಯಾಲೆನ್ಸ್ ಬೇಕ್ರಮ್ಮಾ...

ಈ ತಮ್ಮಯ್ಯನ ಶಿಷ್ಯ ಕಾರಿಯರ್ ಬ್ಯಾಲೆನ್ಸ್ ಮಾಡೋದರಿಂದಲೇ ಎಲ್ಲರಿಗೂ ಬ್ಯಾಲೆನ್ಸ್‌ಡ್ ಡಯಟ್ ಸಿಕ್ತಾ ಇದೆ ಅನ್ನೊ ತರಹ ಮಾತಾಡ್ತಿದ್ದ.

''ಕೆಲ್ಸಕ್ಕೆ ಸೇರಿದ ಒಸದರಲ್ಲಿ ಅಯ್ಯಾ ಅವರಿಗೆ ನಾನೇ ಅಲ್ಲವಾ ಊಟ ತರ್ತಿದ್ದದ್ದು... ಹಹಹ್ಹ.... ನಂಗೆ ನಗಾ ಬತ್ತದೆ ತಾಯಿ... ಇನ್ನೂ ಹುಡುಗು ಪಾಪ. ಚಳ್ಕೆರೆಯಿಂದ ಹೊಟ್ಟೆಗಿಲ್ದೆ ಓಡಿಬಂದವರಂಗೆ ಪುಸುಕ್ಕನೆ ಆ ಫ್ಯಾಕ್ಟರೀಲಿ ಸೇರ್ಕಳ್ಳಿಲ್ಲವರಾ. ಈ ಕಾಲ್ದಾಗೆ ಗಾಂಧಿಬಜಾರ್ ಮೂರ್ತಿ ಓಟ್ಲಿಂದ ಕಿಲುಬು ಕ್ಯಾರಿಯರ್‌ನಾಗೆ ಅಳಿಸಿದನ್ನ ಅಳೇ ಉಪ್ಪಿನಕಾಯಿ... ನಾನೂ ಆಗ್ಲೇಯ ಈ ಊಟ ತಕಂಡು ತಲಪಿಸೋ ಕೆಲಸ ಸುರು ಮಾಡ್ಕಂಡಿದ್ದು ಎಷ್ಟೋದಪ ಊಟ ಬರ್ದಿದ್ದಾಗ ನಾನೇ ಸ್ವಾಮೇರಿಗೆ ನಾಕಾಣೆ ಎಂಟಾಣೆ ಕೊಟ್ಟಿದೀನಿ. ಟ್ರೆಂ ಆಂಗಿತ್ತೇಳಿ... ಈಗ ಯಾವೋನೋ ಬೇವರ್ಸಿ ಅಂಜನಿ ಅನ್ನೋ ಅಸಿಸ್ಟೆಂಟು ಕ್ಯಾರಿಯರ್ ಕಳೆದ ಅಂತ ನನ್ನ ಕೆಲ್ಸದಿಂದ ಡಿಸ್‌ಮಿಸ್ ಮಾಡಾರೆ... ಈ ದೊಡ್ಡ ಸಾಹೇಬ್ರು... ಆಗಲಿ ತಗಳಿ ದೇವರು ನೋಡ್ಕಂತಾನೆ... ಮುನ್ನೂರ ಇಪ್ಪತ್ತು ಊಟದ ಮನೆ - ಎಂಟು ಜನ ಸೈಕಲ್ ಆಳು ಒಂದೇ ಸಮ ಊಟಾ ಸಪ್ಲೈ ಮಾಡ್ತಾ ಔನಿ... ನನಗೇನು ಬೋನಸ್ಸಾ - ಪ್ರಾವಿಡೆಂಟ್ ಫಂಡಾ-ರಜಾ ದಿನಗಳು ಅವಾ ಕಾಯಿಲೆ-ಕಸಾಲೆ ನಾಳೆ

ರಿಟೈರ್ ಆದ್ರೆ ಯಾರು ಪಿಂಚಣಿ ಕೊಡೋರು ತಾಯಿ - ನಾವೂ ಮನುಷ್ಯರಲ್ಲವರಾ ಮಿಸಿನ್ನಿನಂಗೆ ಕೆಲಸ ಮಾಡಾದು ಸುಲಭ ಅಯ್ತಾ?''

ತಮ್ಮಯ್ಯ ಒಂದೇ ಸಮ ತನ್ನ ವೃತ್ತಿಯ ಕಷ್ಟ ಹೇಳಿಕೊಳ್ಳುವ ಸಮಯದಲ್ಲೇ ನನ್ನನ್ನು ಎಷ್ಟು ಚಿಕ್ಕವನನ್ನಾಗಿ ಮಾಡಿಬಿಟ್ಟನಲ್ಲಾ ಎಂದೆನಿಸಿತು. ಇಡೀ ಜೀವಮಾನ ರಾಶಿ ಕ್ಯಾರಿಯರ್ ಹೊತ್ತ ಸೈಕಲ್ ತುಳಿದೇ ಕಳೆಯುವ ಈ ಶ್ರಮಜೀವಿಯನ್ನು ಡಿಸ್‌ಮಿಸ್ ಮಾಡಿ ನಾನು ಪಾತಾಳದಲ್ಲಿ ಕೂಡ ಕಡಿಮೆ ತೂಕದ ಗುಬ್ಬಚ್ಚಿ ಆಗಿಬಿಟ್ಟಿದ್ದೆ. ಹೀಗೆಂದರೆ ಗುಬ್ಬಚ್ಚಿಗೆ ಅವಮಾನವಾದೀತೇನೋ!

''ತಾಯೀ ನೀವು ಈ ಮನೆಗೆ ಕಾಲಿಟ್ರಿ-ಮಾಲಕ್ಷ್ಮಿ ಮಹಾ ಲಕ್ ಸ್ವಾಮೇರಿಗೆ ಅಮರಿಕೊಂಡು ಬಿಡ್ತು ನೋಡಿ - ಒಳ್ಳೇ ಅಡಿಗೆ ಜತೆಗೆ ನಿಮ್ಮ ಕಾಲ್ಗುಣದಿಂದ ಕಂಪನಿ ಒಳಗೂ ಸೂಪರ್‌ವೈಜರ್ ಕೆಲಸ ಸಿಕ್ತು... ಸಂಬಳಾನೂ ಜಾಸ್ತಿ ಆಯ್ತು... ನಮಗೆ ಊಟ ತರೋ ಆಳುಗಳಿಗೆ ಜಾಸ್ತಿ ಸಂಬಳ ಮಾಡಿದಿರಾ!... ಅದೇ ನಾಕೂವರೆ ರೂಪಾಯಿ... ಒಂದೊಂದು ಮನೆಯೋರೂ ಒಂದೊಂದು ಥರ ಜನ. ಅನುಸರಿಸ್ಕಂಡು ಆಳುಗಳನ್ನೂ ಸಾಕ್ಕಂಡು ಟೇಮಿಗೆ ಸರಿಯಾಗಿ ಊಟಾ ಹಾಕ್ತೀವ್ನಿ... ಇಂಥಾದ್ರಾಗೆ ಏನೋರವಷ್ಟು ಎಡವಟ್ಟು ಆಯ್ತದೆ - ಕ್ಯಾರಿಯರ್‌ಗಳು ಕಳೀತಾವೆ... ಅದ್ಕೆ ಕತ್ತೇ ಹಿಜಕಿ ಬಿಡಾದಾ!! ಹೇಳಿ...''

ನನ್ನ ಬಾಯಿ ಎಂದೋ ಕಟ್ಟಿಹೋಗಿತ್ತು. ನನ್ನ ಮನೆ ಯಜಮಾನ್ತಿ ಹೊಗಳಿಸಿಕೊಂಡು ಕಿವಿಯಿಂದ ಕಿವಿತನಕಾ ನಗುತ್ತಾ ಇದ್ದಳು. ನಾನು ಸಿಗರೇಟಿನ ಮೇಲೆ ಸಿಗರೇಟು ಎಳೆದು ಹಾಕುತ್ತಿದ್ದೆ. ತಮ್ಮಯ್ಯ ಜೇಬಿನಿಂದ 15 ರೂಪಾಯಿ ತೆಗೆದು ಎದುರಿಗಿಟ್ಟ.


''ಇಕ್ಕಳಿ.... ನಂತಾವಿರಾದು ಇಷ್ಟೆ. ಸೈಕಲ್ ರಿಪೇರಿ ಮಾಡ್ಸಿದ್ದಕ್ಕೆ ಕೊಡಬೇಕಿತ್ತು. ಆ ಸೈಕಲ್ ಷಾಪ್ ಪಾಪಣ್ಣಂಗೆ ಹೇಳ್ಕಂತೀನಿ ಬಿಡಿ... ಇನ್ನು ನಿಮ್ಮ ಕಳೆದ ಸ್ಟೀಲ್ ಕ್ಯಾರಿಯರ್‌ಗೆ ತಿಂಗಳಾ ಎಲ್ಡು ರೂಪಾಯಿ ಇಡ್ಕಳ್ಳಿ. ಆಯ್ತು ತಾಯಿ ನಂದಿನ್ನೇನು ಇಲ್ರ. ಇಷ್ಟು ದಿನ ಊಟಹಾಕಿ ಈಗ ಒಂದು ಕಾರಿಯರ್ ಕಳೆದ ಅಂತ ಬಿಡಾಕಾಯ್ತದಾ! ಇಸ್ವಾಸ ತಾಯಿ. ನಿಮ್ಮ ಮುಖ ನೋಡಿ ಈ ಮನೆಗೆ ಬತ್ತೀನಿ. ಸ್ವಾಮೇರು ನನ್ನ ನೋಡಾದೆ ಇಲ್ಲವಲ್ಲಾ - ದುಡ್ಡು ಏನ್ ಬುಡಿ. ಬ್ಲಾಕ್ ಮಾರ್ಕೆಟ್ ಬಡ್ಡಿಮಕ್ಕಳೂ ಸಂಪಾದಿಸ್ತಾರೆ - ಈ ಕ್ಯಾರಿಯರ್ ಸಪ್ಲೈ ಮಾಡಿ ನಾನೇನು ಆಸ್ತಿ ಮಾಡ್ಕಂಡಿದೀನಾ? ನಾಕು ಜನ ಉಡುಗರಿಗೆ ಕೆಲ್ಸ ಕೊಟ್ಟು ದಾರಿ ಮಾಡಿಕೊಟ್ಟಿದ್ದೀನಿ. ನಂದು ಇನ್ನೇನೂ ಆಸೆ ಇಲ್ರ. ನಮ್ಮ ಅಂಜನಿಗೆ ಲಗ್ನ ಮಾಡಿಬುಟ್ರೆ ಸಾಕು. ರುಸ್ತುಂ ಹುಡುಗ, ಹತ್ತು ಕ್ಯಾರಿಯರ್ ಕಳೀಲಿ. ನಾನು ಕಟ್ಟಿಕೊಟ್ರೂ ಚಿಂತಿಲ್ಲ, ಅವನು ಚೆಂದಾಗಿರ್ಬೇಕು....

ಎಂದು ಮುಕ್ತಾಯ ಹಾಡಿದ. ಮಾತಾಡಿ ದಣಿದಿದ್ದ, ಬೀಡಿ ಹಚ್ಚಿ ಸುಧಾರಿಸಿಕೊಂಡ. ಮನೆಯಾಕೆ ಒಳಗೆ ಹೋಗಿ ಕಾಫಿ ತಂದುಕೊಟ್ಟಳು. ಮನೆಯ ಯಜಮಾನನಾದ ನಾನು ಇಡೀ ಈ ವ್ಯವಹಾರಕ್ಕೆ ಸಂಬಂಧಪಟ್ಟವನೇ ಅಲ್ಲ ಎಂಬಂತೆ ಇತ್ತು ಸಂದರ್ಭ. ಮನೆಯ ಯಜಮಾನ್ತಿ ಮಾತಾಡಿದಳು.

''ತಮ್ಮಯ್ಯ, ಆ ರೂಪಾಯಿ ಜೇಬಿಗೆ ಹಾಕ್ಕೋ, ನಾನು ಚೀಟಿ ಕಟ್ತಾ ಇರ್ರೋ ಸ್ಟೀಲ್ ಅಂಗಡೀಲಿ ಒಂದು ಕ್ಯಾರಿಯರ್ ಸಾಯಂಕಾಲ ತರ್ತೀನಿ. ನಾಳೆಯಿಂದ ಊಟಾ ತಕ್ಕೊಂಡು ಹೋಗೋಕೆ ಅಂಜನೀನೇ ಕಳಿಸು... ಮತ್ತೆ ಹುಷಾರಾಗಿರೋಕೆ ಹೇಳು. ಹಾಗೆಲ್ಲಾ ಕ್ಯಾರಿಯರ್ ಕಳೆದರೆ ಯಾರಿಗೆ ಸಿಟ್ಟು ಬರುಲ್ಲ ಹೇಳು... ನಿನ್ನ ಸಂಬಳದಲ್ಲಿ ಕ್ಯಾರಿಯರ್ ದುಡ್ಡು ಹಿಡ್ಕೊಳ್ಳೋ ಅಷ್ಟು ಬಡತನ ದೇವರು ಕೊಟ್ಟಿಲ್ಲ...''

''ಗೊತ್ತಮ್ಮಾ ನಿಮ್ಮ ಗುಣಾ... ನೀವು ನಂಗೆ ಸಂಬಳಾ ಕೊಡದಿದ್ರೂ, ಊಟ ತಕ್ಕೊಂಡು ಹೋಗದು ನಿಲ್ಲಲ್ಲ ಬತ್ತೀನಿ, ನಾಳೆ ಅಂಜನಿ ಬತ್ತಾನೆ''

ಎಂದು ರೂಪಾಯಿ ವಾಪಸ್ಸು ನಿಕ್ಕರ್ ಜೇಬಿಗೆ ಸೇರಿಸಿ ಹೊರಟೇಹೋದ. ಈ ಮಧ್ಯ ನನ್ನ ಅಧಿಕಾರ ಏನು! ಅವನು ಅನ್ನದಾತ ಈಕೆ ಅನ್ನಪೂರ್ಣೆ, ನಾನು ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯುವವನು ಮಾತ್ರ. ನನಗೇಕೆ ಈ ಜವಾಬ್ದಾರಿ ಎಲ್ಲಾ. ಬಂದ ಸಂಬಳಾನ್ನೆಲ್ಲಾ ಈ ಮಹರಾಯ್ತಿ ಕೈಗೆ ಮಾಮೂಲಾಗಿ ಹಾಕಿಬಿಟ್ರೆ ಆಯ್ತು. ತಲೆತಗ್ಗಿಸಿಕೊಂಡು ಫ್ಯಾಕ್ಟರಿಗೆ ಹೋಗಿ ಬರೋ ಕುರಿ ಮಾತ್ರ ನಾನು. ಕುರುಬರು ಬೇರೆ ಇದ್ದಾರೆ ನಮ್ಮನ್ನು ಕಾಯೋಕೆ ಎಂದುಕೊಂಡು ಸುಮ್ಮನಿದ್ದೀನಿ



ಅಪಾಲಜಿ ಸಾರ್ ಅಪಾಲಜಿ....

- ಎಚ್. ಗೋಪಾಲಕೃಷ್ಣ

ರಾತ್ರಿ ಹತ್ತು ಹತ್ತೂವರೆಗೆ ಸಿಟಿಯಿಂದ ನಗರದ ಯಾವುದೇ ಬಡಾವಣೆಗೆ ಸಿಟಿ ಬಸ್ಸಿನಲ್ಲಿ ಹೋಗಿ, ನಿಮಗೆ ಕನಿಷ್ಟ ಅಂದರೂ ಹತ್ತು ಜಗಳವಾಡುವ ಗುಂಪು ಸಿಗುತ್ತೆ. ಯಾಕೆ ಜನ ಹೀಗೆ ನೆಮ್ಮದಿ ಕಳೆದುಕೊಂಡು ಜಗಳವಾಡಿಕೊಂಡು ಮುಖ ಉರಿಸಿಕೊಂಡು ಮನೆ ಸೇರ್ತಾರೆ ಅಂತ ಸುಮಾರು ವರ್ಷಗಳಿಂದಲೂ ನಾನು ತಲೆ ಕೆಡಿಸಿಕೊಂಡಿದೇನೆ; ಆದರೂ ಕೆಲವು ಸಲ ನಾನೂ ಜಗಳ ಆಡಿರುವುದುಂಟು - ನನಗೆ ಸೀಟು ಸಿಗಲಿಲ್ಲ ಅಂದಾಗಲೋ ಹೆಂಗಸರ ಸೀಟಿನಲ್ಲಿ ಯಾರೋ ಧಡಿಯ ಕೂತು ಹೆಂಗಳೆಯರಿಗೆ ಜಾಗ ಬಿಟ್ಟುಕೊಡಲ್ಲವೆಂದಾಗಲೋ ಅಥವಾ ಕಂಡಕ್ಟರು ಚಿಲ್ಲರೆ ಕೊಡಲಿಲ್ಲ ಅಂದಾಗಲೋ... ಹೀಗೆ. ಮೊನ್ನೆ ತುಂಬಾ ದಿವಸಗಳಾದ ನಂತರ ಬಿ.ಎಂ.ಟಿ.ಸಿ. ಬಸ್ಸಿಗೆ ನಿಂತಿದ್ದೆ. ರಾತ್ರಿ ಹತ್ತೂಕ್ತಾಲಾಗಿತ್ತು. ಬಸ್ ಸ್ಟ್ಯಾಂಡಿನ ತುಂಬಾ ಗಿಜಿ ಗಿಜಿ ಜನ. ಜನ ಅದೇಕೆ ಹುಚ್ಚು ಹಿಡಿದ ಹಾಗೆ ಸಿಟೀಗೆ ಬರ್ತಾರೆ ಅದೂ ಹೆಂಗಸರು ಮಕ್ಕಳನ್ನು ಈ ಸರಿ ರಾತ್ರಿ ಹೊತ್ತಿನಲ್ಲಿ ಕರ್ಕೊಂಡು ಅಂತ ತುಂಬಾಸಲ ಯೋಚನೆ ಮಾಡಿದೀನಿ - ಇನ್ನೂ ಉತ್ತರ ಹುಡುಕುತ್ತಲೇ ಇದೀನಿ. ಬಸ್ಸು ಬಂದ ಕೂಡಲೇ ಜನ ಅದಕ್ಕೆ ನುಗ್ಗೋದೂ ಬಸ್ಸು ಓವರ್ ಕೆಪಾಸಿಟಿ ಜನರನ್ನ ತುಂಬಿಕೊಂಡು ಅತ್ತ ಹೊರಟ ಕೂಡಲೇ ಮತ್ತೊಂದು ಬಸ್ಸು ಬರೋದೂ ಅದಕ್ಕೂ ಜನ ತುಂಬಿಕೊಳ್ಳೋದೂ ಅದು ಹೊರಟ ನಂತರ ಮತ್ತೊಂದು ಬಸ್ಸು... ಹೀಗೆ ಆರೆಂಟು ಬಸ್ಸುಗಳು ಹೋದ ನಂತರ ನಮ್ಮ ಏರಿಯಾದ ಬಸ್ಸೂ ಬಂತು. ನಾಲ್ಕು ಬಸ್ಸು ತುಂಬುವ ಜನ ಒಂದೇ ಬಸ್ಸಿನಲ್ಲಿ ಅದು ಹೇಗೋ ತುರುಕಿಕೊಂಡರು. ಅವರ ಮಧ್ಯೆ ನಾನೂ ಹೇಗೋ ತೂರಿ ಒಂದು ಇಂಚಿನಷ್ಟು ಜಾಗದಲ್ಲಿ ನಿಂತೆ. ಕಂಡಕ್ಟರು ಅದು ಹೇಗೋ ಸಂದೀಲಿ ಕೈಕಾಲು ತೂರಿಸಿ ಟಿಕೆಟ್ ತಗೊಂಡದ್ದೂ ಆಯಿತು. ಅಷ್ಟರಲ್ಲಿ ಒಂದು ಸಾವಿರ ಸಲ ಜನ ಬಸ್ಸಿನ ಟಾಪ್‌ಗೆ ತಟ್ಟಿ ರಯ್ಯಾ ರಯ್ಯಾ ಅಂತ ಕೂಗಿದ್ದರೂ ಬಸ್ಸು ಹೊರಟಿರಲಿಲ್ಲ. ಟಿಕೆಟ್ ಕೊಟ್ಟು ಮುಗಿಸಿದ ಕಂಡಕ್ಟರು ಮುಂದಿನ ಬಾಗಿಲಿನ ಹತ್ತಿರ ನಡೆದು ಅಲ್ಲಿ ಇದ್ದವರಿಗೂ ಟಿಕೆಟ್ ಕೊಟ್ಟ ನಂತರ ಆಯ್ತೇನಣ್ಣಾ ಅಂತ ಡ್ರೈವರು ಕೇಳಿ ಬಸ್ಸು ಹೊರಡಿಸಿದ.

ಒಂದು ಸ್ಟಾಪಿನಷ್ಟು ಬಸ್ಸು ಚಲಿಸಿರಬಹುದು. ನನ್ನ ಬಳಿ ಕೂತಿದ್ದವರು ಧಡದಡ ಎದ್ದರು. ''ಅಯ್ಯೋ ಸಾರ್ ನಾನು ಆಕಡೆ ಹೋಗಬೇಕಿತ್ತೂ...'' ಅಂತ ಕೂಗುತ್ತಾ ಬಸ್ಸಿನಿಂದ ಇಳಿಯಲು ಧಾವಿಸಿದರು. ಬೇಡಿಕೊಳ್ಳದೇ ಪಕ್ಕದಲ್ಲಿಯೇ ಖಾಲಿಯಾದ ಸೀಟು, ಬೇರೆಯವರು ಸೀಟಿನ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸುವ ಮೊದಲೇ ನಾನು ಅದರ ಮೇಲೆ ಕೂತೆ, ಹಿಗ್ಗಿನಿಂದ ಸುತ್ತ ನೋಡಿದೆ. ಕೋಟಿಗೆ ಒಂದು ಸಲ ಈ ರೀತಿಯ ಅವಕಾಶ ನಮ್ಮ ಬಿ.ಎಂ.ಟಿ.ಸಿ. ಬಸ್ಸುಗಳಲ್ಲಿ ನನ್ನಂಥವರಿಗೆ ಸಿಕ್ಕುವುದು. ಇಂಥಹ

ಅವಕಾಶ ಸಿಕ್ಕಿ ಸೀಟಿನ ಮೇಲೆ ಕೂರುವಂತಹ ಲಾಟರಿ ಹೊಡೆದರೆ ಅದನ್ನ ಖಂಡಿತಾ ಬಿಡತಕ್ಕದ್ದಲ್ಲ ಅಂತ ನನ್ನ ಅನುಭವ ನನಗೆ ಪಾಠ ಕಲಿಸಿದೆ.

ಸೀಟು ಸಿಕ್ಕಿದ ನಂತರ ಅದೇನು ಮಾಡ್ತೀರೀ? ನಾನು ಅದನ್ನೇ ಮಾಡಿದೆ. ಕಿಟಕಿಯಿಂದ ಆಚೆ ನೋಡುವ ಸೀಟಲ್ಲ ನನ್ನದು. ಈ ಪಕ್ಕ ಒಂದು ಧಡಿಯಾ ಎದುರಿಗೆ ಅವನ ಎರಡರಷ್ಟು ಧಡಿಯಾ... ಅದರಿಂದ ಹಾಗೇ ಕಣ್ಣುಮುಚ್ಚಿದ್ದೆ, ಕನಸು ಕಾಣಲು ಶುರು ಹಚ್ಚಿದೆ. ಸಿನಿಮಾ ಹೀರೋ ಆಗಿ ನೂರು ಸಿನಿಮಾದಲ್ಲಿ ನಟಿಸಿದ ಕನಸು ಕಾಣುತ್ತಿದ್ದೆ. ಜೋರು ಮಾತಿನಿಂದ ಎಚ್ಚರವಾಯಿತು. ಸರ್ಕಲ್ಲಿನ ಬಳಿ ಬಂದಿದ್ದೇವೆ. ಪಕ್ಕದಲ್ಲಿ ನಿಂತ ಡಬಲ್ ಧಡಿಯಾ ಮುಂದೆ ನಿಂತಿದ್ದ ಮುದುಕರಿಗೆ ''ಬನ್ನಿ ಹಿಂದೆ ಬನ್ನಿ ನೀವು ಬಾಗಿಲಲ್ಲಿ ನಿಂತರೆ ಕೆಳಗಿರೋರು ಮೇಲಕ್ಕೆ ಬರಬೇಡವೇ?'' ಅಂತ ಕೇಳುತ್ತಿದ್ದಾನೆ.

ಮುದುಕರು ಒಳಗೆ ಬಂದ ಹಾಗೆ ಮಾಡಿದರು, ಮತ್ತೆ ಅಲ್ಲೇ ನಿಂತರು. ಧಡಿಯ ''ಬನ್ರೀ ಒಳಗೆ'' ಅಂತ ಕೊಂಚ ಏರು ಧನಿಯಲ್ಲಿ ಕೂಗಿದ. ಯಜಮಾನರು ಒಂದು ಹೆಜ್ಜೆ ಒಳಗೆ ಬಂದರು.

''ಏನು ಹಾಗೆ ಕೂಗ್ತೀಯಾ? ಒಳಗೆ ಬರ್ತಾ ಇಲ್ಲವಾ?'' ಸಿಡುಕಿದರು.

''ಅಲ್ಲಾ ಸಾರ್ ಇನ್ನ ಎರಡು ಹೆಜ್ಜೆ ಒಳೀಕ್ಕೆ ಬಂದರೆ ಇನ್ನೂ ಕೆಳಗಿರೋ ಜನ ಮೇಲಕ್ಕೆ ಬರಬಹುದು ಅದಕ್ಕೇ ಹೇಳಿದ್ದೂ...''

''... ನೀನ್ಯಾವನೋ ನನಗೆ ಹೇಳೋಕ್ಕೇ...'' ಯಜಮಾನರು ಒಂದೇ ಸಲ ಕೂಗೋಕ್ಕೆ ಶುರು ಮಾಡೋದೇ...? ಧಡಿಯ ಏನೋ ಮಾತು ಹೇಳಲು ಹೊರಟ. ಪಕ್ಕದಲ್ಲಿದ್ದೋನು ಬಿಡಿ ಸಾರ್ ಬಿಡಿ ಸಾರ್ ಅಂದ ಧಡಿಯ ಸುಮ್ಮನಾದ. ಯಜಮಾನರಿಗೆ ಮತ್ತೂ ರೇಗಿತು.

''ಏನೋ ಮುಚ್ಚಿಕೊಂಡಿರೂ ಅಂತ ಅಂತೀಯಾ? ಬೇವಾರ್ಸೀ...'' ಒಂದೇ ಸಮ ಹೊಲಸು ಮಾತು ಯಜಮಾನರ ಬಾಯಿಂದ ಹೊರಡಲು ಶುರುವಾಯಿತು.

''ಯಜಮಾನರೇ ನಿಮಗೆ ಮುಚ್ಚಿಕೊಂಡು ಇರು ಅಂತ ನಾನು ಹೇಳಲೇ ಇಲ್ಲ...'' ಅಂದ ಧಡಿಯ.

ಯಜಮಾನರ ಕೋಪ ಮತ್ತೂ ನೆತ್ತಿಗೇರಿತು. ಧಡಿಯನಿಗೆ ಸುಮ್ಮನಿರಿ ಸಾರ್, ಸುಮ್ಮನಿರಿ ಸಾರ್ ಅಂತ ಮೊದಲಿಂದಲೂ ಹೇಳುತ್ತಿದ್ದವನು ಮತ್ತೆ ಮತ್ತೆ ಹೇಳಿದ. ಧಡಿಯ ಅದೇನೋ ಮಾತಿಲ್ಲದೆ ಮೌನ ವಹಿಸಿದ. ಒಂದು ಸಲ ಈತ ಕೈ ಬೀಸಿದರೆ ಮುದುಕನ ತಲೆ ಒಡೀಬಹುದು ಆದರೂ ಧಡಿಯ ತೆಪ್ಪಗಿದಾನಲ್ಲಾ ಅಂತ ಅಯ್ಯೋ ಅನಿಸಿತು. ಘಾಟಿ ಮುದುಕ ಬಾಯಿ ಮಾಡಿ ಮತ್ತೂ ಹತ್ತು ಬೈಗುಳ ಬೈದು ಗೆದ್ದೆ ಅಂದುಕೊಂಡ. ಸುತ್ತಲೂ ನೋಡಿ ವಿಜಯದ ನಗೆಯನ್ನೂ ಬೀರಿದ!

ನಾನು ಇಳೀಬೇಕಾದ ಸ್ಟಾಪಿನಲ್ಲಿ ಇಳಿಯುವ ಬದಲು ಒಂದು ಸ್ಟಾಪು ಮುಂದೆ ಹೋಗಿಬಿಟ್ಟೆ - ನನ್ನ ಸ್ಟಾಪಿನಲ್ಲಿ ನಿದ್ದೆ ಬಂದುಬಿಟ್ಟಿತ್ತು. ಮುಂದಿನ ಸ್ಟಾಪಿನಲ್ಲಿ ಇಳಿದು ವಾಪಸ್ಸು ಬರ್ತಾ ಇದೀನಿ. ಜೋರು ಮಾತು ಎದುರಿನಿಂದ ಕೇಳಿಸುತ್ತಾ ಇದೆ.

''ನಿಮ್ಮ ಮರ್ಯಾದೆ ಹೋಗುತ್ತೆ ಅಂತ ತೆಪ್ಪಗಿದ್ದೆ....'' ಅಂತ ಮಾತು. ಸರ ಸರ ನಡೆದೆ, ಹತ್ತಿರಕ್ಕೆ ಸಮೀಪಿಸಿದೆ. ಧಡಿಯ ಅದೇ ಬಸ್ಸಿನವನು ಮುದುಕರ ಸರಿಸಮಕ್ಕೆ ನಡೀತಿದ್ದ.

''ನಿಮಗೆ ಮುಚ್ಕೊಂಡು ಕೂತ್ಕೋ ಅಂತ ನಾನು ಹೇಳಲೇ ಇಲ್ಲ. ಬಸ್ಸಿನಲ್ಲಿ ಎಲ್ಲರ ಎದುರಿಗೆ ನೀವು ನನ್ನನ್ನ ಬೇವಾರ್ಸಿ ಅಂತ ಬೈದಿರಿ. ನನಗೂ ಆ ಭಾಷೆ ಬೇಕಾದಷ್ಟು ಬರುತ್ತೆ. ಅದೇ ಭಾಷೇಲಿ ನಿಮಗೂ ಬೈದಿದ್ದರೆ ನಿಮ್ಮ ಮಾರ್ಯದೆ ಏನು ಉಳೀತಿತ್ತು....''

''ನೀನು ಬೈದೆ ಮುಚ್ಕೊಂಡಿರು ಅಂತ....''

''ಇಲ್ಲ ಸಾರ್ ನಿಮಗೆ ನನ್ನ ತಂದೆ ಅಷ್ಟು ವಯಸ್ಸಾಗಿದೆ... ನಿಮ್ಮನ್ನ ಬೈಯಲೇ ಆರೀತಿ?''

''ನೀನು ಬೈದೆ ನನಗೆ ಕೇಳಿಸ್ತು...''

''ಇಲ್ಲ ಯಜಮಾನರೇ ನಾನು ಬೈದಿಲ್ಲ ನಮ್ಮ ಅಪ್ಪ ಅಮ್ಮ ನನಗೆ ಆ ರೀತಿ ಬೈಯೋದು ಕಲಿಸಿಲ್ಲ...''

''ಇಲ್ಲಕಣೋ ನೀನು ಬೈದೇ ಬೈದೆ...''

ಕುತೂಹಲ ಕೆರಳದೇ ಇರುತ್ಯೇ?

ಅವರ ಹಿಂದೆ ಹೆಜ್ಜೆ ಹಾಕಿದೆ.

''ಇಲ್ಲ ಯಜಮಾನರೇ, ದೊಡ್ಡವರಿಗೆಲ್ಲಾ ಹಾಗೆ ನಾನು ಬೈಯೋಲ್ಲ. ನಿಮಗೆ ಕೇಳಿಸಿತು ಅಂದರೆ ನಿಮಗೆ ಯಾವಾಗಲೂ ಆ ರೀತಿ ಬೈಸಕೊಂಡು ಅಭ್ಯಾಸ ಆಗಿರಬೇಕು ಅಷ್ಟೇ...?''

''ನೀನು ಬೈದಿಲ್ಲ ತಾನೇ? ಹೋಗಲಿ ಬಿಡು...''

''ಅದೆಂಗೆ ಹೋಗಲಿ ಬಿಡು ಆಗುತ್ತೆ ಸಾರ್? ಬಸ್ಸಿನಲ್ಲಿ ನನ್ನ ಮರ್ಯಾದೆ ತೆಗೆದಿಲ್ವಾ ನೀವು? ಬೇವಾರ್ಸಿ ಅಂತ ಬೈದು?''

''ಅದಕ್ಕೇನು ಮಾಡಬೇಕು ಈಗ...?''

''ಏನಿಲ್ಲ ಸಾರ್, ಅಪಾಲಜಿ ಕೇಳಿ, ತಪ್ಪು ಮಾಡಿದೀರಿ ತಾನೇ?..''

''ಮಗ ಬರ್ತಿದಾನೆ ಕತೆ ಕೇಳಿದರೆ ನಾಳೆಯಿಂದ ಆಚೆ ಕಳಿಸೋಲ್ಲಾ ಅಂತ ಈಗ ಸಾರಿ ಕೇಳ್ತೀರಾ? ಒಂದು ಮಾತು ಕೊಡಿ... ಮಗಂಗೆ ಈ ವಿಷಯ ಹೇಳೋಲ್ಲಾ ಆ?...''

''ಅದೇನಪ್ಪಾ ಮಾತೂ...?''

''ಇನ್ಮೇಲೆ ಯಾರಿಗೂ ಬೇವಾರ್ಸಿ ಅಂತ ಬೈಯೋಲ್ಲಾ ಅಂತ ಭಾಷೆ ಕೊಡಿ....''

ಮುದುಕರು ಧಡಿಯನ ಕೈಮೇಲೆ ಭಾಷೆ ರೀತಿ ಕೈಹಾಕಿದರು. ಅಷ್ಟು ಹೊತ್ತಿಗೆ ಮಗ ಹತ್ತಿರಕ್ಕೆ ಬಂದ.

''ಇವರು ನನ್ನ ಸ್ನೇಹಿತರು....'' ಅಂತ ಮುದುಕರು ಧಡಿಯನ ಗುರುತನ್ನ ಮಗನಿಗೆ

ಮಾತನಾಡಿಸಿದರು. ಮುದುಕರು ಅವರ ಮಗ ಅತ್ತ ನಡೆದರು. ಧಡಿಯ ನನ್ನನ್ನು ನೋಡಿ ನಸುನಕ್ಕ.

''ಮುದುಕ ಪ್ರತಿ ದಿವಸ ಹೀಗೇ ಸಾರ್. ಪಾಠ ಕಲಿಸಬೇಕೂಂತ ಕಾದಿದ್ದೆ. ಇವತ್ತು ಪಾಠ ಕಲೀತು ತಾತ...'' ಅಂತ ನಕ್ಕ.

''ಪಾಠವನ್ನ ತಾತ ಒಂದೇ ಅಲ್ಲ ಕಲಿತದ್ದು, ಮುದುಕರು ಅಷ್ಟೊಂದು ನಿಮ್ಮನ್ನ ಬೈತಾ ಇರಬೇಕಾದರೂ ಅದು ಹೇಗೆ ತೆಪ್ಪಗಿದೀರಿ ಅಂತ ಆಶ್ಚರ್ಯ ಪಟ್ಟೆ ನಾನು. ಬಿಡಿ ಮುದುಕರ ಮರ್ಯಾದೆ ಕಾಪಾಡಿದಿರಿ, ಅಷ್ಟೇ ಅಲ್ಲ ದಪ್ಪಗಿರೋರ ಮರ್ಯಾದೇನೂ...'' ಅಂದೆ. ಮುದುಕರು ಕೊನೆಯಲ್ಲಿ ಗಲಿಬಿಲಿಗೊಂಡು ಒಂದೇ ಸಲಕ್ಕೆ ಅಪಾಲಜಿ ಕೇಳಿದ್ದು ನೆನಪಿಗೆ ಬಂತು. ಧಡಿಯ ಕೈಹಿಡಿದುಕೊಂಡು ಮುಖ ಅರಳಿಸಿ ನಕ್ಕ. ಆ ನಗು ನನಗೆ ಈಗಲೂ ನೆನಪಿನಾಳದಲ್ಲಿ ಭದ್ರವಾಗಿ ಕೂತಿದೆ!

★★★



ಮುಡಿಯ ಹಿಡಿದಾ ನಿನ್ನ ಮುಗಿಸದೇ ಬಿಡಲಾರೆ
ಮೂರು ಲೋಕವೇ ಬರಲಿ ನಿನ್ನ ತಡೆಗೆ
ನನ್ನ ಕಿರುನೋಟ ನೇಣಗುಣಿಕೆಯು ನಿನಗೆ
ನಿನ್ನ ಕೊನೆ ಆಸೆ... ನನ್ನ ಮೋಹ ಸುಳಿಗೆ...

ವಿದ್ಯಮಾನಗಳು

- ಕು.ಶ.

ಯಾವುದೇ ಹೊಸ ಹಿಂದಿ ಸಿನಿಮಾ ಬಿಡುಗಡೆಯಾದಾಗ ಅದು ಮಾಧ್ಯಮಗಳಲ್ಲಿ ಒಂದುವಾರ ಮುಖ್ಯಸುದ್ದಿಯಾಗುತ್ತದೆ, ಮುಂದಿನ ವಾರ ಎಲ್ಲರೂ ಅದನ್ನು ಮರೆಯುತ್ತಾರೆ. ಸಂಜಯ್‌ದತ್ ಅಭಿನಯದ- ಲಗೇ ರಹೋ ಮುನ್ನಾಭಾಯಿ ಇದಕ್ಕೆ ಅಪವಾದವಾಗಿದೆ. ಮೂರು ತಿಂಗಳು ಮೀರಿದರೂ ಇನ್ನೂ ಗಾಂಧಿಗಿರಿ ಬಗೆಗೆ ಎಲ್ಲೆಲ್ಲೂ ಮಾತು. ಏನಿದು ಗಾಂಧಿಗಿರಿ ಎಂದು ಕೇಳುವವರು ಯಾರಾದರೂ ಇದ್ದರೆ, ಇಲ್ಲಿದೆ ಒಂದು ಉದಾಹರಣೆ: ಮೇಷ್ಟರೊಬ್ಬರು ನಿವೃತ್ತರಾಗಿದ್ದಾರೆ, ಆದರೆ ಪಿಂಚಣಿ ಸ್ಯಾಂಕ್ಷನ್ ಮಾಡುವ ಗುಮಾಸ್ತನಿಗೆ ಲಂಚವಾಗಿ ಕೊಡಬೇಕಾದಷ್ಟು ಹಣ ಅವರಲಿಲ್ಲ. ಅವರ ಸಹನೆಯ ಮಿತಿ ಮೀರಿದಾಗ ಗುಮಾಸ್ತನಿಗೆ ಹಣದ ಬದಲು- ಈ ವಾಚ್ ಸಾವಿರ ರೂಪಾಯಿ, ಈ ಷರ್ಟ್ ಇನ್ನೂರು ರೂಪಾಯಿ, ಈ ಬೆಲ್ಟ್ ನೂರು ರೂಪಾಯಿ ಎಂದು ಕೊಡುತ್ತಾ ಈ ಪ್ಯಾಂಟ್ ಐನೂರು ರೂಪಾಯಿ ಹಂತ ತಲಪಿದಾಗ, ಗುಮಾಸ್ತ ಬಸ್ ಕೀಜಿಯೇ ಎಂದು ಹೇಳಿ ತತ್‌ಕ್ಷಣ ಸ್ಯಾಂಕ್ಷನ್ ಕೊಡುತ್ತಾನೆ, ಗಾಂಧಿಗಿರಿಗೆ ವಿಜಯ.

ಇದು ಕೊಟ್ಟ ಭಾಷೆಗೆ ತಪ್ಪಲಾರೆ ಎನ್ನುವ ಆದರ್ಶದ ಪುಣ್ಯಕೋಟಿ ಎಂಬ ಹಸು- ಖಂಡವಿದೆ ಕೋ/ ಮಾಂಸವವಿದೆ ಕೋ/ ಗುಂಡಿಗೆಯ ಬಿಸಿರಕ್ತವಿದೆ ಕೋ/ ಚಂಡ ವ್ಯಾಘ್ರನೆ ನೀನಿದೆಲ್ಲವ ಸುಂಡು ಸಂತಸದಿಂದಿರು - ಎನ್ನುವ ಪಂಕ್ತಿಗಳನ್ನು ಜ್ಞಾಪಿಸುತ್ತದಲ್ಲವೇ? ಅಲ್ಲಿ ಇದನ್ನು ನೋಡಿ ನಾಚಿದ ಹುಲಿರಾಯ ಹಾರಿ ನೆಗೆದು ಪ್ರಾಣಬಿಟ್ಟಂತೆ ಮುನ್ನಾಭಾಯಿಯಲ್ಲಿ ಗುಮಾಸ್ತ ಮೇಷ್ಟರ ಕೆಲಸ ಆಗಲೇ ಮಾಡಿಕೊಟ್ಟ. ನಿಜಜೀವನದಲ್ಲಿ ಆ ಕಚೇರಿಯ ಎಲ್ಲಾ ಗುಮಾಸ್ತರೂ ಸೇರಿ ಮೇಷ್ಟರನ್ನು ಹೊಡೆದು ಓಡಿಸುತ್ತಿರಲಿಲ್ಲವೇ ಎಂದು ನೀವು ಕೇಳದಿದ್ದರೆ, ಮುನ್ನಾಭಾಯಿ ನಿಜವಾಗಿಯೂ ಉತ್ತಮ ಸಿನಿಮಾ.

★★★

ಐವತ್ತು ಲಕ್ಷ ಜನರ ಬೆಂಗಳೂರು ಮಹಾನಗರ ಎಪ್ಪತ್ತೈದು ಲಕ್ಷ ಜನರ, ಏಳುನೂರು ಚದರ ಕಿಮಿ ವಿಸ್ತೀರ್ಣದ ಗ್ರೇಟರ್ - ವಿಸ್ತೃತ ಬೆಂಗಳೂರು ಆಗಲು ಎಲ್ಲಾ ಸಿದ್ಧತೆಗಳು ನಡೆಯುತ್ತಿವೆ. ನೂರು ಜನ ಕಾರ್ಪೊರೇಟರುಗಳ ಸಂಖ್ಯೆ ನೂರಾಐವತ್ತಾಗುತ್ತದೆ, ಕಂಟ್ರ್ಯಾಕ್ಟರುಗಳಿಗೆ ಹಂಚಲು ಇರುವ ಹಣ ದ್ವಿಗುಣವಾಗುತ್ತದೆ ಎಂದು ರಾಜಕಾರಣಿಗಳಿಗೆ ಖುಷಿಯೋ ಖುಷಿ. ಆದರೆ ನಮ್ಮಂತಹ ಪ್ರಜೆಗಳಿಗೆ ಕೊಡಬೇಕಾದ ತೆರಿಗೆಗಳು ದ್ವಿಗುಣವಾಗಿ, ರಸ್ತೆಯಲ್ಲಿ ಹರಡಿರುವ ಕಸ ಮೂರುಪಟ್ಟು ಹೆಚ್ಚಿ, ಟ್ರಾಫಿಕ್ ಜಾಂ ಗಳ ಸಂಖ್ಯೆ ನಾಲ್ಕರಷ್ಟಾಗಿ ಒಂದೊಂದು ಜಾಂ ಗಳಲ್ಲೂ ಕಳೆಯಬೇಕಾದ ಸಮಯ ಐದು ದಫ ಹೆಚ್ಚಾಗುತ್ತದಲ್ಲವೆ ಎನ್ನುವ ಭಯ.

★★★

ನಾನು ಎಷ್ಟೋ ವರ್ಷಗಳ ಹಿಂದೆ ನೋಡಿದ ಒಂದು ತಮಿಳು ಸಿನಿಮಾ, ನ್ಯಾಯಾಲಯದ ಸೀನು- ಲಾಯರ್ ವೇಷದಲ್ಲಿರುವ ಶಿವಾಜಿ ಗಣೇಶನ್ ಗಂಟೆಗೆ ಮುನ್ನೂರು ಕಿಮಿ ವೇಗದಲ್ಲಿ ಚಲಿಸುವ ಬುಲೆಟ್ ಟ್ರೈನಿನಂತೆ ತನ್ನ ವಾದವನ್ನು ಮಂಡಿಸುತ್ತಿದ್ದಾನೆ, ಚಿತ್ರಮಂದಿರದಲ್ಲಿ ಪ್ರೇಕ್ಷಕರ ಶಿಳ್ಳು, ಶಿಳ್ಳುಹಾಕಲು ಬರದವರಿಂದ ಕರತಾಡನ. ಈ ಸಿನಿಮಾದ ಅತಿ ದೊಡ್ಡ ಆಕರ್ಷಣೆಯೇ ಶಿವಾಜಿಯ ಆ ಡೈಲಾಗ್ ಡೆಲಿವರಿ ಎಂದು ಮುಂದೆ ಗೊತ್ತಾಯಿತು. ಈಚಿನ ಕನ್ನಡದ ಒಂದು ಸೀರಿಯಲ್ಲಿನ ಯಶಸ್ಸೂ ಅದರ ಕೋರ್ಟ್ ಸೀನುಗಳಂತೆ.

ಮಾಧ್ಯಮ ಮತ್ತು ನ್ಯಾಯಾಲಯಗಳ ಈ ಸಂಬಂಧ ಈಗ ಉಲ್ಟಾ ಆಗುತ್ತಿದೆ, ಮೀಡಿಯಾ ನ್ಯಾಯಾಲಯಗಳ ಕಾರ್ಯವೈಖರಿಯನ್ನು ತಿಳಿಸುವ ಬದಲು ಮೀಡಿಯಾ ನ್ಯಾಯಾಲಯಗಳ ಕೆಲಸವನ್ನೇ ತೆಗೆದುಕೊಳ್ಳುತ್ತಿದೆ, ಟ್ರಯಲ್ ಬೈ ಮೀಡಿಯಾ ಎಂದು ಈಗ ಗುಲ್ಲೋಗುಲ್ಲು. ಪ್ರಿಯದರ್ಶಿನಿ ಮಟ್ಟೋ ಪ್ರಕರಣದಲ್ಲಿ ಇವನೇ ಅಪರಾಧಿ ಎಂದು ಮೀಡಿಯಾ ಮುಂಚೆಯೇ ನಿರ್ಧರಿಸಿತ್ತು, ಕೋರ್ಟುಗಳು ಆ ನಿರ್ಣಯಕ್ಕೆ ಒಪ್ಪಲೇ ಬೇಕಾಯಿತು ಎಂದು ಕೆಲವರ ವಾದ. ಈಗ ಇನ್ನೊಂದು ಇಂತಹುದೇ ಪ್ರಕರಣ ಸುದ್ದಿಯಲ್ಲಿದೆ. ಈ ನ್ಯಾಯಾಲಯದ ಕೇಸಿಗಿಂತ ಕರಣ್ ಥಾಪರ್ -ರಾಂ ಜೆತ್‌ಮಲಾನಿ ನಡುವಿನ ಟೀವಿ ಚಾನಲ್ಲಿನಲ್ಲಿ ಪ್ರಸಾರವಾದ ವಾಗ್ವಾದ ಹೆಚ್ಚು ಜನರ ಗಮನ ಸೆಳೆದಿರುವಂತಿದೆ.

★★★

ಇನ್ನೊಂದು ಟೀವಿ ಸುದ್ದಿ ಚಾನಲ್ಲಿನ ಇನ್ನೊಂದು ಕಾರ್ಯಕ್ರಮ: ಈ ಚಾನಲ್ ಬೆಂಗಳೂರು ಆಕಾಶವಾಣಿ ಪ್ರಸಾರಮಾಡುವ ನಿಮ್ಮ ಮೆಚ್ಚಿನ ಚಿತ್ರಗೀತೆಗಳಂತೆ ನಿಮ್ಮ ಮೆಚ್ಚಿನ ಇಂದಿನ ಸುದ್ದಿಗಳು ಎನ್ನುವ ಕಾರ್ಯಕ್ರಮ ಪ್ರಾರಂಭಿಸಿದೆ. ವೀಕ್ಷಕರು ಪ್ರತಿದಿನ ನಮಗೆ ಈ ಈ ಸುದ್ದಿ ಬೇಕು ಎಂದು ಎಸ್‌ಎಂಎಸ್ ಕಳುಹಿಸಬೇಕು. ಚಾನಲ್ ಇದು ಇಂದಿನ ಅತಿ ಹೆಚ್ಚು ಜನರು ಮೆಚ್ಚಿದ ಸುದ್ದಿ, ಇದು ನಂಬರ್ ಎರಡು ಎಂದು ಪ್ರಸಾರಮಾಡುತ್ತದೆ.

ಪ್ರೇಕ್ಷಕರಿಗೆ ಇಲ್ಲಿರುವ ಆಯ್ಕೆ ಆ ದಿನದ ಸುದ್ದಿಗಳಲ್ಲಿ ತಮಗೆ ಬೇಕಾದ್ದನ್ನು ಆರಿಸಿಕೊಳ್ಳುವುದು ಮಾತ್ರ. ನಿಜವಾಗಿಯೂ ನಮಗೆ ಬೇಕಾದ ಸುದ್ದಿಗಳನ್ನು ನೋಡಲು ಆಗುವ ಹಾಗೆ ಇದ್ದಿದ್ದರೆ? ರಾಜಕೀಯದಿಂದ ದೇವೇಗೌಡರ ನಿವೃತ್ತಿ, ಭ್ರಷ್ಟಾಚಾರದಲ್ಲಿ ಭಾರತ ವಿಶ್ವದಲ್ಲಿ ನಂಬರ್ ನಾಲ್ಕರಿಂದ ನೂರಾನಲ್ವತ್ತಕ್ಕೆ, ಇಂಡಿಯಾಕ್ಕೆ ಕ್ರಿಕೆಟ್ಟಿನಲ್ಲಿ ಮತ್ತೆ ವಿಶ್ವಕಪ್ - ಎಂತೆಂತಹ ಹಿತವಾದ ಸುದ್ದಿಗಳನ್ನು ಬಯಸಬಹುದಾಗಿತ್ತು?

★★★

ಹುಳಿ ಸಾರ್ ಹುಳಿ

– ಬೇಲೂರು ರಾಮಮೂರ್ತಿ

ಏನೂಂದ್ರೆ, ಅಂತ ಸುಬ್ಬಮ್ಮ ಹಿತ್ತಿಲ ಬಾಗಿಲ ಆಚೆ ನಿಂತು ಕೂಗಿದಾಗ ಕಪಿನೀಪತಿ ತಲೆ ಚಚ್ಕೊಂಡು ಬಂತು ಗ್ರಹಚಾರ ಮೂರುದಿನ ಕೇರಾಫ್ ಅಡಿಗೆ ಮನೆ ಅಂದ್ಕೊಂಡು ಹತ್ತಿರ ಹೋಗಿ 'ಏನೇ' ಅಂದರು ಅದಿಕ್ಕೆ ಸುಬ್ಬಮ್ಮ ಏನೂಂದ್ರೆ, ಇವತ್ ಯಾಕೋ ನಿಮ್ ಕೈಯಿನ ಕುಂಬಳಕಾಯಿ ಹುಳಿ ತಿನ್ನಬೇಕು ಅನಿಸಿದೆ ಮಾಡ್ತೀರಾ ಅಂತ ಕೇಳಿದರು. ಯಾಕೆ ಒದೆ ತಿನ್‌ಬೇಕು ಅಂತ ಅನಿಸಿಲ್ವ ಅಂತ ಕೇಳಬೇಕೂನ್ನಿಸಿದರೂ ಕೇಳದೇ ಅದೇನೇ ಈ ವಯಸ್ಸಲ್ಲಿ ಈ ಬಯಕೆ ಅಂತ ಕೇಳಿದರು. ಸಧ್ಯ ಆಚೆ ಮನೆ ಅಲಮೇಲಮ್ಮನ ತರ ಚಿನ್ನದ ಸರ ಕೇಳ್ಲಿಲ್ವಲ್ಲ. ಏನೋ ಹುಳಿಯುಪ್ಪುಖಾರ ಚೆನ್ನಾಗಿ ಹಾಕಿ ರುಚಿಯಾಗಿ ಮಾಡ್ತೀರಾ ಅಂತ ಕೇಳ್ದೆ ಅದನ್ನ ನಡೆಸಿಕೊಡೋಕೆ ನಿಮ್ ಕೈಲಿ ಆಗಲ್ವ ಅಂದು ತುಟಿಯೂದಿಸಿದರು.

ಅದಿಕ್ಕೇನಂತೆ ನಡಿಯೇ ನಾನೇ ಇವತ್ತು ಅಡಿಗೆ ಮಾಡ್ತೀನಿ ಅಂದು ಕಪಿನೀಪತಿ ಅಡಿಗೆ ಮನೆಗೆ ಬಂದಾಗ ಸುಬ್ಬಮ್ಮ ಹಿಂಬಾಲಿಸಿ ಬಂದು ಕುಂಬಳ ಕಾಯಿ ಹೆಚ್ಚಿ ಕೊಟ್ಟಾಗ ಓ ಇದು ಮೂರು ದಿನದ ಕರ್ಮ ಅಲ್ಲ ಅಂದು ಸ್ವಲ್ಪ ನೆಮ್ಮದಿ ತಂದುಕೊಂಡರು.

ಸ್ವಲ್ಪ ಹೊತ್ತಿಗೆ ಗಾಯಿತ್ರಿ ಬಂದರು ಬನ್ರೀ ನಮ್ ಯಜಮಾನರು ಕುಂಬಳಕಾಯಿ ಹುಳಿ ಮಾಡ್ತಿದ್ದಾರೆ ನಿಮಗೂ ಒಂದು ನಾಲ್ಕು ಸೌಟು ಕೊಡ್ತಿನಿ ಅಂದರು. ಕಪಿನೀಪತಿಗೆ ಕೋಪ ಬಂತು ನಾನು ನಮ್ಮನೇಲಿ ಹುಳಿ ಮಾಡೋ ವಿಚಾರ ಬೇರೆಯವರಿಗೆ ಯಾಕೆ ಗೊತ್ತಾಗಬೇಕು ಅಂತ ಆದರೂ ಅವರು ಹುಳಿಗೆ ಮಿಕ್ಸಿ ಮಾಡ್ಕೊಳುವಾಗ ಕಾಯಿ ತುರಿಯುವಾಗ ಒಗ್ಗರಣೆ ಹಾಕುವಾಗ ಗಾಯಿತ್ರಿ ತುಂಬಾ ಹತ್ತಿರ ನಿಂತಿದ್ದು ಯಾಕೋ ಒಳಗೊಳಗೇ ಆಪ್ಯಾಯಮಾನವಾಯಿತು.

ಅಮ್ಮನ ಫೋನ್ ಬಂದಾಗ ಸುಬ್ಬಮ್ಮ ಅಮ್ಮಾ ಇವತ್ತು ಇವರು ಕುಂಬಳಕಾಯಿ ಹುಳಿ ಮಾಡಿದ್ರು ಅದೇನು ಸಖತ್ತಾಗಿತ್ತು ಅಂತೀಯ ಸರಿಯಾಗಿ ಜಮಾಯಿಸಿಬಿಟ್ರೆ ಅಂದಾಗ ಸುಬ್ಬಮ್ಮನಮ್ಮ ಅಳಿಯಂದಿರನ್ನ ಒಂದೆರಡು ದಿನ ಇಲ್ಲಿಗೆ ಕಳಿಸ್ತೀಯಾ ಅಂತ ಕೇಳಿದರು ಕಪಿನೀಪತಿ ಸಖತ್ ಸಿಟ್ಕೊಂಡ್ರು.

ಮನೆಗೆ ಬಂದ ಗಾಯಿತ್ರಿ ಎಂಟು ಸೌಟು ಹುಳಿ ತಗೊಂಡು ಬಾಯಿ ಮುಚ್ಕೊಂಡು ಮನೆಗೆ ಹೋಗ್ಲಿಲ್ಲ ನಾಲ್ಕಾರು ಜನಕ್ಕೆ ಹೇಳೇ ಹೋದಳು. ಮಾಧವ ಬಂದು ಕಪಿ... ಯಾಕೋ ಬಾಯಿ ಕೆಟ್ ಹೋಗಿದೆ. ನೀ ಮಾಡಿದ ಕುಂಬಳಕಾಯಿ ಹುಳೀಲಿ ಒಂದು ನಾಲ್ಕು ತುತ್ತು ಅನ್ನ ಕಲಿಸಿಕೊಡೋ ಅಂದಾಗ ನಾಲ್ಕು ಬಾರಿಸೋ ಕೋಪ ಬಂತು. ಹದ ಗೊತ್ತಾಗ್ದೇ ಹುಳೀನ ಹೆಚ್ಚಿಗೆ ಮಾಡಿದ್ದೇ ಸರಿಹೋಯ್ತು ಅನಿಸಿತು.

ಇಷ್ಟೇ ಆಯ್ತು ಅಂದ್ಕೊಂಡಿದ್ರೆ, ಸಂಜೆ ನಾಲ್ಕು ಗಂಟೆಗೆ ಸರಿಯಾಗಿ ಕಪಿನೀಪತಿ ಕಟ್ಟೆಗೆ ಹೋಗಬೇಕು ಅಂತ ಅಂದ್ಕೊಂಡಿದ್ದಾಗ ರಾಧ, ಸಂಗೀತ, ಗಿರಿಜ, ಶೈಲಜ, ಅನುಪಮ ಎಲ್ಲರೂ ಬಂದಾಗ ಪಂಚ ಮಹಿಳಾ ದೃಷ್ಟಾ ಮಹಾಪಾತಕ ಆಗಮನ ಅಂದ್ಕೊಂಡು ಆಚೆ

ಕಾಲು ತೆಗೆದಾಗ ಸುಬ್ಬಮ್ಮ ಏನೂಂದ್ರೆ ಅಂದಳು ಕಪಿನೀಪತಿ ನಿಂತರು. ಕಪಿನೀಪತಿಯ ಓಟಕ್ಕೆ ಸುಬ್ಬಮ್ಮನ ಏನೂಂದ್ರೆ ಒಂದು ವಿಷಲ್ ಇದ್ದಹಾಗೆ ನಿಲ್ಲಲೇ ಬೇಕು. ಸುಬ್ಬಮ್ಮ ಹತ್ತಿರ ಬಂದು ಇವರೆಲ್ಲ ಯಾಕೆ ಬಂಟದಾರೆ ಹೇಳಿ ಅಂತ ಕೇಳಿದರು. ನನಗೇನೇ ಗೊತ್ತು ಅಂದರು ಕಪಿನೀಪತಿ.

ನಾವು ಹೇಳ್ತೀನಿ ಅಂದು ಮುಂದೆ ಬಂದ ಅನುಪಮ ನೀವು ಮಾಡಿದ ಕುಂಬಳಕಾಯಿ ಹುಳಿ ಟೇಸ್ಟ್ ಮಾಡೋಕೆ ಬಂದಿದೀವಿ ಅಂದಳು. ಕಪಿನೀಪತಿ ರಪರಪಾಂತ ತಲೆ ಚಚ್ಕೊಂಡ. ಅವನು ಹೊರಟಾಗ ಮತ್ತೆ ಸುಬ್ಬಮ್ಮನ ಏನೂಂದ್ರೆ. ಲೇ ಅಡಿಗೆ ಮನೇಲಿ ಹುಳಿ ಬಡಿದಿದೀನಿ ಕೊಡು ಕುಡ್ಕೊಂಡ್ ಹೋಗ್ಲಿ ಅಂದು ರೇಗಿದರು.

ಇಲ್ಲ ಸಾರ್ ನಾವು ಕುಡಿಯಕ್ಕೆ ಬಂದಿಲ್ಲ ತಿನ್ನಕ್ಕೆ ಬಂದಿದೀವಿ. ನೀವು ಮಾಡಿದ ಕುಂಬಳಕಾಯಿ ಹುಳೀಲಿ ಅನ್ನ ಕಲಸಿಕೊಡಿ ಅಂದಳು ಶೈಲಜ. ನಾನಾ ಅಂದು ಬೆಚ್ಚಿದರು ಕಪಿನೀಪತಿ. ಹುಳಿಯೂ ನಿಮ್ಮದೆ ಅನ್ನವೂ ನಿಮ್ಮದೆ ಹೊಟ್ಟೆ ಮಾತ್ರ ನಮ್ಮದು ಪ್ಲೀಸ್ ಸರ್ ಅಂದು ಗೋಗರೆದಳು ರಾಧ. ಇವಳು ಮಾಡೋದು ಒಂದೊಂದು ಅಲ್ಲ ಕರ್ಮ ಅಂದು ಹೆಂಡತಿಯತ್ತ ಹೋಗಿ ಏನೇ ಇದು ಅಂದರು. ಇನ್ನೊಬ್ಬರಿಗೆ ನಾಲ್ಕು ತುತ್ತು ಅನ್ನ ಹಾಕೋದು ಪುಣ್ಯದ ಕೆಲಸ, ಮಾಡ್ರೀ ಅಂದರು ಸುಬ್ಬಮ್ಮ. ಹೌದು ಪುಣ್ಯ ಬಂದು ಮುಂದಿನ ಜನ್ಮದಲ್ಲಿ ನಿನಗಿಂತ ಒಳ್ಳೆ ಹೆಂಡ್ತಿ ಸಿಗಲಿ ಅಂತ ಅಂದುಕೊಂಡ ಕಪಿನೀಪತಿ. ಪಾತ್ರೆಗೆ ಹುಳಿ ಹಾಕ್ಕೊಂಡು ಅನ್ನ ಹಾಕಿ ಕಲಸಿ ಒಂದೊಂದು ತುತ್ತು ಅಂತ ರಾಧ, ಸಂಗೀತ, ಗಿರಿಜ, ಶೈಲಜ, ಅನುಪಮ ಇವರಿಗೆಲ್ಲ ಕೊಟ್ಟರು. ಅವರೆಲ್ಲ ತಿಂದು ಹೊಗಳಿದ್ದೂ ಹೊಗಳಿದ್ದೇ. ಆದರೆ ಅಂಥಾ ಹೊಗಳಿಕೆ ಕಪಿನೀಪತಿಗೆ ಬೇಕಿರಲಿಲ್ಲ.

ಮುಂದೆ ಇನ್ನೊಂಥಾ ಎಡವಟ್ಟಾಯ್ತು ನೋಡಿ... ಒಂದಿನ ಕಪಿನೀಪತಿ ಇವತ್ತೆಲ್ಲೂ ಹೋಗಲ್ಲ ಅಂತ ಅಂಗಡಿಯಿಂದ ತಂದಿದ್ದ ಕೋಡುಬಳೆ ಇಟ್ಕೊಂಡು ತಿನ್ತಾ ಪೇಪರ್ ಓದ್ತಾ ಇದ್ದಾಗ ರಾಧನ ಮನೆ ಚಿಂಟು ಬಂದು ನಮ್ಮಪ್ಪ ಕರೀತಿದಾರೆ ಬರಬೇಕಂತೆ ಅಂತು. ಆ ನನ ಮಗನಿಗೆ ಕೊಬ್ಬು. ಅಲ್ಲ ಅವನೇ ಬರಕ್ಕೇನು ಮಗನ ಕೈಲಿ ಹೇಳಿಕಳಿಸಿ ನನ್ನನ್ನ ಕರೆಸ್ಕೊಬೇಕಾ ಅಂತ ಬೇಜಾರು ಮಾಡಿಕೊಂಡು ಅರ್ಧಗಂಟೆ ನಂತರ ಹೋದರು.

ಬನ್ನಿ ಬನ್ನಿ ಅಂದರು ಅಪ್ಯತೆಯಿಂದ ಕರೆದ ರಾಜಾರಾಯ ಕಾಫಿ ಕೊಡಿಸಿದ. ಕಾಫಿ ತಂದ ರಾಧ ನೀವು ಅವತ್ತು ಕೈತುತ್ತು ಹಾಕಿದ ಕುಂಬಳಕಾಯಿ ಹುಳಿಯ ರುಚಿ ಇನ್ನೂ ಕೈಯಿಂದನೂ ಹೋಗಿಲ್ಲ ಬಾಯಿಂದನೂ ಹೋಗಿಲ್ಲ ಅಂತ ಅಂದಾಗ ಏನು ನೀವು ನಿತ್ಯ ಹಲ್ ಉಜ್ಜೋ ಅಭ್ಯಾಸ ಇಲ್ವೆ ಅಂತ ಕಪಿನೀಪತಿ ಕೇಳಿದಾಗ ರಾಜಾರಾಯ ಮೈ ಕುಣಿಸಿ ನಕ್ಕು ಬೆಸ್ಟ್ ಜೋಕ್ ಆಫ್ ದ ಡೇ ಅಂದರು.

''ಈಗ ವಿಷಯಕ್ಕೆ ಬರ್ತೀನಿ... ನೋಡಿ ನಾಡಿದ್ದು ನಮ್ಮಮನೆಗೆ ನನ್ನ ಸೋದರತ್ತೆ, ಇವಳ ದೊಡ್ಡಮ್ಮ, ನನ್ನ ಚಿಕ್ಕಮ್ಮನ ಅತ್ತಿಗೆ, ಇವಳ ಅಕ್ಕನ ಬೀಗಿತ್ತಿ ಎಲ್ಲ ಬರ್ತಿದ್ದಾರೆ'' ಅಂದರು ರಾಜಾರಾಯರು. ಅದಕ್ಕೆ ನಾನೇನು ಮಾಡಬೇಕಪ್ಪ ಅಂತ ಕಪಿನೀಪತಿ ಬೋಡುತಲೆ ಕೆರೆದುಕೊಂಡರು. ರಾಜಾರಾಯರು ಮುಂದುವರಿಸಿ ''ನೋಡಿ ಅವರೆಲ್ಲ ಆ ಕಾಲದವರು ಚೆನ್ನಾಗಿ ತಿಂದು ಬೆಳೆದವರು. ಚೆನ್ನಾಗಿ ಊಟ ಬಡಿಸಿ ಆನಂದಿಸಿದವರು.

ಎಲ್ಲರಿಗೂ ಸಮಾನಾಂತರವಾದ ಆಸೆ, ಅಭಿರುಚಿ ಇದೆ'' ಅಂದರು. ಯಾರ್ದೋ ಅಭಿರುಚಿ ಕಟ್ಕೊಂಡು ನಾನೇನು ಮಾಡ್ಲಿ ಅಂತ ತಲೆ ಕೆರ್ಕೊಂಡಾಗ ರಾಜಾರಾಯರು ನಿಮ್ಮಿಂದ ಒಂದು ಕೆಲಸ ಆಗಬೇಕಲ್ಲ ಅಂತ ಬೇಡಿದರು. ನಂತರ ಅವರು ನಾಡಿದ್ದು ಬರ್ತಾರೆ, ನಾಡಿದ್ದು ರಾತ್ರಿಗೆ ಅವತ್ತು ನಿಮ್ಮನೇಲಿ ಮಾಡಿದ್ರಲ್ಲ ಅಂತಪದ್ದೇ ಕುಂಬಳಕಾಯಿ ಹುಳಿ ಮಾಡಿಕೊಡಬೇಕು ಪದಾರ್ಥ ಏನೇನು ಬೇಕೂಂದ್ರೆ ನಾನು ತರಿಸಿ ಕೊಡ್ತೀನಿ ಅವರೆಲ್ಲರಿಗೂ ಕುಂಬಳಕಾಯಿ ಹುಳಿ ಅಂದ್ರೆ ಪಂಚಪ್ರಾಣ. ತಟ್ಟೆ ಮುಂದೆ ಕೂತು ಅರ್ಧರ್ಧ ಕೆ.ಜಿ. ಅಕ್ಕಿ ಅನ್ನ ಇಳಿಸಿಬಿಡ್ತಾರೆ. ಇವಳ್ ಮಾತಿಗೆ ಬಂದು ನೀವು ಮಾಡಿದ ಹುಳಿ ವಿಚಾರ ತಿಳಿಸಿದಾಗ ಅವರದೆಲ್ಲ ಒಂದೇ ಹಠ ನಮಗೆ ಕಪಿನೀಪತಿಯವರ ಕೈ ರುಚಿಯೇ ಆಗಬೇಕು ಅಂತ. ಪ್ಲೀಸ್ ಅಂದರು.

ಕಪಿನೀಪತಿಗೆ ನಖಶಿಖಾಂತ ಕೋಪ ಬಂತು. ಇವರು ನನ್ನನ್ನೇನು ಕುಕ್ ಅಂದ್ಕೊಂಡಿದಾರಾ ಹೇಗೆ. ನಾನು ರುಚಿಯಾಗಿ ಅಡಿಗೆ ಮಾಡಿದರೆ ಅದು ನಮ್ಮನೆಗೆ. ಇವತ್ತು ಇವಳು ನಾಳೆ ಇನ್ನೊಬ್ಬು ನಾಡಿದ್ದು ಮತ್ತೊಬ್ಬು ಇದು ಹೀಗೇ ಆದರೆ ನಾನು ಪರ್ಮನೆಂಟಾಗಿ ಸೌಟು ಹಿಡಿಯಬೇಕಾಗುತ್ತೆ ಅಂತ ಅಂದುಕೊಂಡು ಎದ್ದರು. ರಾಧ ಅಡಿಗೆ ಮನೆ ಆಕಡೆ ಇದೆ ಅಂತ ಕೈ ತೋರಿಸಿದಳು.

ಕಪಿನೀಪತಿ ಸಿಟ್ಟಿನ ಮುಖದಿಂದ ರಾಜಾರಾಯರನ್ನ ತಿನ್ನುವಂತೆ ನೋಡಿ ''ಇನ್ನೊಂದ್ ಸಾರಿ ಕುಂಬಳಕಾಯಿ ಹುಳಿ ಅಂತ ಮಾತು ತೆಗೆದರೆ ಏನಾದರೂ ಕಿತಾಪತಿ ಮಾಡಿ ನಿಮ್ಮ ಸಂಸಾರದಲ್ಲಿ ಹುಳಿ ಹಿಂಡ್‌ಬಿಡ್ತೀನಿ ಏನಂದ್ಕೊಂಡಿದೀರ ನನ್ನ ಅಂತ ಗಟ್ಟಿಯಾಗಿ ಅರಚಿ ಆಚೆ ಬಂದರು.

ರಾಧ ರಾಜರಾಯ ಇಬ್ಬರೂ ಬೆರಗಾಗಿ ನೋಡ್ತಿದ್ದರು.

ಮನೆಗೆ ಬಂದವರೇ ಹೆಂಡ್ತಿನ ಹುಡುಕಿ ಅವಳ ಎದುರಿಗೆ ನಿಂತು ಎಲ್ಲ ಹೇಳಿ ''ಇವೆಲ್ಲ ನಿನ್ನಿಂದನೇ ಆಗಿದ್ದು ಇನ್ನೊಂದ್ಸಾರಿ ಹುಳಿ, ಸಾರು ಅಂತ ರಾಗ ತೆಗೀಬೇಕಲ್ಲ'' ಅಂದರು. ಸುಬ್ಬಮ್ಮ ನಕ್ಕು ಅಯ್ಯೊ ಅವರನ್ಯಾಕೆ ಅನ್ತೀರ ಅವರಿಗೆ ನಿಮ್ಮ ಕೈಲಿ ಹುಳಿ ಮಾಡಿಸ್ಕೊಳಿ ಅಂತ ನಾನೇ ಹೇಳಿದ್ದು ಒಂದ್ ನಾಕು ಸೌಟು ಹುಳಿ ಮಾಡ್ಕೊಟ್ರೆ ನಿಮ್ ಗಂಟೇನು ಹೋಗುತ್ತೇಂದ್ರೆ ಅಂದಾಗ ಕಪಿನೀಪತಿ ಜೋರಾಗಿ ಕೈ ಎತ್ತಿ ನಿಧಾನವಾಗಿ ಕೆಳಗಿಳಿಸಿದರು.

ಗಂಡನ್ನ ಇನ್ನೊಬ್ಬರ ಮನೆಗೆ ಅಡಿಗೆಗೆ ಕಳಿಸೋದು ತಪ್ಪು ಆದರೆ ನನ್ನ ಗಂಡ ಚೆನ್ನಾಗಿ ಹುಳಿ ಮಾಡ್ತಾರೇಂತ ಹೊಗಳಿಸಿಕೊಳ್ಳೋದು ಹೇಗೆ ಅಂತ ಸುಬ್ಬಮ್ಮ ಯೋಚಿಸಿದರು. ಗಂಡ ಯಾವ ಮಾತಿಗೆ, ಯಾವ ಕ್ರಿಯೆಗೆ, ಯಾವ ತಿಂಡಿಗೆ ಯಾವ ನಗೂಗೆ ಕರಗ್ತಾರೆ ಅಂತ ಗೊತ್ತು ಹೇಗೂ ಅವರೆಲ್ಲ ಬರೋದು ನಾಡಿದ್ದಲ್ವ ಅಷ್ಟೊತ್ಗೆ ಏನಾದರೂ ಮಾಡಿದರಾಯಿತು ಅಂದ್ಕೊಂಡು 'ಏನೂಂದ್ರೆ ಬಿಸಿ ಸ್ಟ್ರಾಂಗ್ ಕಾಫಿ ಕೊಡ್ಲಾ' ಅಂತ ಕೇಳಿದರು. ಕಾಫಿ ಅಂದ ತಕ್ಷಣ ಅರ್ಧ ಕರಗಿದ ಕಪಿನೀಪತಿ ಹೂಂ. ಕೊಡು ಅಂದು ಸೊಂಟಕ್ಕೆ ಕೈ ಹಾಕಿ ನಶ್ಯದ ಡಬ್ಬಿ ತೆಗೆದರು.

★★★

ಗುಂಡಿಯನ್ನು ಒತ್ತಿದರೆ

- ಹಾ.ರಾ.

ಡಾ|| ರಾಧಾಕೃಷ್ಣನ್‌ರವರು ನವದೆಹಲಿಯ ವಿಜ್ಞಾನ ಮಂದಿರದಲ್ಲಿ ಒಂದು ವಿದ್ಯುತ್ ಗುಂಡಿಯನ್ನು ಒತ್ತಿದಾಗ ದೆಹಲಿಗೆ ಆರುನೂರು ಮೈಲಿಗೂ ದೂರದಲ್ಲಿರುವ ವಿಶಾಖಪಟ್ಟಣದಲ್ಲಿ ಜಯಲಕ್ಷ್ಮಿ ಬಂಗಾಳಕೊಲ್ಲಿಗೆ ಇಳಿದು ಮಂದಹಾಸ ಬೀರುತ್ತ ತೇಲಿ ಹೋದಳು. ಡಾಗ್ ಹ್ಯಾಮರ್ ಷೀಲ್ಡ್ ರೂ ಗುಂಡಿಯನ್ನು ಒತ್ತಿದರು. ಅವರು ಕಣ್ಣುಮುಚ್ಚಿ ಬಿಡುವುದರಲ್ಲಿ U.N.O. ಕಟ್ಟಡದ ತುತ್ತತುದಿಗೆ ಏರಿಸಲ್ಪಟ್ಟರು. ಕ್ಲಿಂಟನ್ ಗುಂಡಿಯನ್ನು ಒತ್ತಿದ ಕ್ಷಣಾರ್ಧದಲ್ಲಿ ಲೆವಿನ್‌ಸ್ಕಿ ಶ್ವೇತ ಭವನದಲ್ಲಿ ಹಾಜರಾದಳು. ಹಾಲಿವುಡ್‌ನಲ್ಲಿ ಬೆಲಿಂಡಾಲೀ ತನ್ನ ಕೊಠಡಿಯ ಮುಂಭಾಗದ ಒಂದು ಬಿಳಿ ಗುಂಡಿಯನ್ನು ಒತ್ತಿದಳು. ಬಾಗಿಲು ತೆರೆದುಕೊಂಡಿತು ಮತ್ತೆ ಒಂದು ಕಪ್ಪನೆಯ ಗುಂಡಿ ಒತ್ತಿದಳು. ನಯಾಗರದ ಜಲ ಜಳದಲ್ಲಿ ಉಕ್ಕಿಬಂತು. ಹಸುರು ಗುಂಡಿ ಒತ್ತಿದಳು. ಬಿಸಿ ಬಿಸಿ ಬ್ಲಾಕ್ ಕಾಫಿ ಕಪ್ ಸಮೇತ ಟೇಬಲ್ ಮೇಲಕ್ಕೆ ಬಂತು. ಇನ್ನೊಂದು ಕೆಂಪುಗುಂಡಿ ಒತ್ತಿದಳು. ಜೋಡಿವರ್ಜೀನಿಯ ಸಿಗರೇಟು ಬಂತು. ಆಮೇಲೆ ಚಚ್ಚೌಕದ ಒಂದು ಗುಂಡಿಯನ್ನು ಒತ್ತಿದಳು. ಸೊಗಸಾದ ಕಾಮ ಪ್ರಚೋದನೆಯ ಕಾದಂಬರಿ ಬಂತು...''

ಡಾ|| ದಾಮೋದರರಂರವರ ಭಾಷಣ ತಡೆಬಡೆ ಇಲ್ಲದೆ ಸಾಗುತ್ತಿತ್ತು. ಈ ಶತಮಾನದ ತಾಂತ್ರಿಕ ಜಗತ್ತಿನ ಘೋಷಣ - "Press the button - heaven is yours" ಎಂದು ಸಾರಿದರು. ಬೋರ್ಡಿನ ಮೇಲೆ ಧ್ಯೇಯ ವಾಕ್ಯವನ್ನು ಬರೆದು ವಿಜ್ಞಾನದ ಮುನ್ನಡೆಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಿದ್ದಳು!

ಮುಂದಿನ ಸೀಟಿನಲ್ಲಿ ಕುಳಿತು ಭಾಷಣ ಕೇಳುತ್ತಿದ್ದರೇಕೆ ಪುಳಕಿತನಾದ ಅವನಿಗೆ ಸ್ಫೂರ್ತಿ ಉಕ್ಕಿ ಬಂತು.

"I will press the button right now' ಎಂದು ಪ್ರೀತಿಯ ಸಂಕೇತವೆನಿಸಿದ ತನ್ನೊಳಗಿದ್ದ ಹೃದಯಕ್ಕೆ SMS ಮಾಡಿ ಆಟೋ ಹತ್ತೇಬಿಟ್ಟ ಜೆ.ಪಿ.ನಗರದ 7ನೇ ಕ್ರಾಸಿಗೆ.

ಕುಮಾರಿ ಮೆಣಸಿನ ಕಾಯಿ ಬಿ.ಎಸ್ಸಿ. ಎಂದು ಬರೆದಿದ್ದ ಬೋರ್ಡು 7ನೇ ಕ್ರಾಸಿನ 'ಪ್ರೇಮವಿಲ್ಲ' ಎಂಬ ಹೆಸರಿನ ಮಹಡಿಯ ಮೇಲೆ ತೂಗಾಡುತ್ತಿತ್ತು. ಶೀಕೆ ಬಿ.ಎಸ್ಸಿ.ಯಲ್ಲಿ ಫೇಲ್ ಆಗಿದ್ದಕ್ಕೆ ಆ ಹುಡುಗಿಯೇ ಕಾರಣವೆಂದು ಇಡೀ ಕಾಲೇಜಿಗೇ ಗೊತ್ತಿತ್ತು! ಪ್ರೇಮವಿಲ್ಲದ ಕಾಂಪೌಂಡ್ ದಾಟಿ ಒಳಕ್ಕೆ ಪ್ರವೇಶ ಮಾಡುತ್ತಿದ್ದ ಹಾಗೆ ಅವನ ಅಂಕೋರ್ಟದಲ್ಲಾದ ರಕ್ತದ ಒತ್ತಡ ಮುಂಭಾಗದ ಬಾಗಿಲಮೇಲಿದ್ದ ಬಿಳಿ ಗುಂಡಿಯನ್ನು ಕೈ ಬೆರಳಿಂದ ಒತ್ತಿಸಿತು. ಬಿಸಿಲು ಮಚ್ಚೆಯ ಮೇಲೆ ಕೇಶ ಸಂಸ್ಕಾರವನ್ನು ಮಾಡಿಕೊಳ್ಳುತ್ತಿದ್ದ ಕು|| ಮೆಣಸಿನಕಾಯಿ ಶೀಕೆಯನ್ನು ಅಲ್ಲಿಂದಲೇ ನೋಡಿ ಸರಕ್ಕನೆ ಇಳಿದು ಟೆಲಿಫೋನಿನ ಐದೂ ಗುಂಡಿಗಳನ್ನು ಮಿಂಚಿನ ವೇಗದಲ್ಲಿ ಒತ್ತಿದಳು!

ಬಿನ್ನಿ ಮಿಲ್ಲಿನ ಕಾರ್ಮಿಕ ಅಧಿಕಾರಿಯೂ ಗುಂಡಿಯನ್ನು ಒತ್ತಿದ. ಸೈರನ್ ಕರ್ಕಶವಾಗಿ

ಕೂಗಿತು. ಸಿಟಿಬಸ್ಸು, ಲಾರಿ, ಕಾರು, ಆಟೋಗಳ ಚಾಲಕರೂ ತಮ್ಮ ಯಂತ್ರಗಳ ಹತ್ತಾರು ಗುಂಡಿಗಳನ್ನು ಒತ್ತಿದರು. ರಸ್ತೆಯಲ್ಲಿ ಶಬ್ದ, ಗೊಂದಲ, ಗಲಾಟೆ, ಹೊಗೆ, ಎಲ್ಲೆಲ್ಲೂ Confusion 'ಪ್ರೇಮವಿಲ್ಲದ' ಸ್ವರ್ಗದ ಬಾಗಿಲು ತೆಗೆದುಕೊಳ್ಳಲೇ ಇಲ್ಲ. ಅಲ್ಲೇ ಹತ್ತಿರದಲ್ಲಿನ ಪೊಲೀಸ್‌ನವ 'ದಾಕಿಟಾಕಿ'ಗೆ ಮೆಸೇಜ್ ಬಂತು! 'ಪ್ರೇಮವಿಲ್ಲದ' ಬಳಿಗೆ ಪೊಲೀಸ್ ವ್ಯಾನೂ ಬಂತು. ನಾಯಿಗಳು ತೆರೆದ ಇಸ್ತ್ರಿ ಪೆಟ್ಟಿಗೆಯಂತೆ ಬಾಯಿಬಿಟ್ಟುಕೊಂಡು ಕೆಳಕ್ಕೆ ಧುಮುಕಿದವು. ಯುವಕ ಪೊಲೀಸ್ ಇನ್‌ಸ್ಪೆಕ್ಟರು ಶೀಕೆಯ ಅಟಾಮಿಕ್ ಲವ್ ಪ್ರಕರಣವನ್ನು ಅರ್ಥ ಮಾಡಿಕೊಂಡು ಹೆಕ್ಕತ್ತುಮೇಲೆ ಎರಡು ಬಿಗಿದು ವ್ಯಾನಿಗೆ ಹತ್ತಿಸಿಕೊಂಡನು. ಶೀಕೆಗೆ ಬೆವರಿಳಿಯುತ್ತಿತ್ತು. ಷರ್ಟಿನ ಗುಂಡಿಗಳನ್ನು ಬಿಚ್ಚಿ ಸ್ವಲ್ಪ ಶೈತ್ಯೋಪಚಾರ ಮಾಡಿಕೊಂಡ ಅಂತೂ ಗುಂಡಿಗೆ ಬಿದ್ದ!

ಅಖಂಡ ಕರ್ನಾಟಕದ ವಿಫಲ ಪ್ರೇಮಿಗಳ ಪರಿಷತ್ತಿನವ ಸಂತೋತ್ಸವ ಅಂದು. ಕುಮಾರಿ ಮೆಣಸಿನಕಾಯಿ - ಚೂರಿಯಂಥ ಮೊನೆಯಾಕೆ - ದಾಯಚೂರಿನಾಕೆ - ತನಗೆ ಆರತಿ ಎತ್ತಲು ಸಿದ್ಧ ಮಾಡಿಕೊಳ್ಳುತ್ತಿದ್ದಾಳೆ ಎಂದು ಭ್ರಮಿಸಿಕೊಂಡು ಮನೆಯ ಮುಂದಿನ ಪಾರಿಜಾತ ಹೂಗಿಡದ ಕಟ್ಟೆಯ ಮೇಲೆ ಕೂತಿದ್ದ ಶೀಕೆ. ತೊಟ್ಟು ಕಳಚಿಕೊಂಡ ಹೂಗಳು ಒಂದೊಂದಾಗಿ ತಲೆಯ ಮೇಲೆ ಬೀಳುತ್ತಿತ್ತು. ಶುಭ ಸೂಚನೆ ಎಂದು ಹರ್ಷಚಿತ್ತನಾಗಿದ್ದ ನಿಮಿಷದಲ್ಲೆ ಕೋರ್ಟಿಗೆ ಹಾಜರಾಗಬೇಕೆಂದು ಮ್ಯಾಜಿಸ್ಟ್ರೇಟರ ಕೋರ್ಟಿನಿಂದ ಅವನಿಗೆ ವಾರೆಂಟ್ ಬಂತು. ಪ್ರಸಿದ್ಧ ಕ್ರಿಮಿನಲ್ ಲಾಯರಾದ ಕು|| ಮೆಣಸಿನ ಕಾಯಿ ಅಪ್ಪನೇ ಫಿರ್ಯಾದನ್ನು ದಾಖಲು ಮಾಡಿಸಿದ್ದನು.

ಶೀಕೆ ಅಪರಾಧಿ ಸ್ಥಾನದಲ್ಲಿ ನಿರಪರಾಧಿಯಂತೆ ಬಂದು ನಿಂತುಕೊಂಡ. ಕು|| ಮೆಣಸಿನಕಾಯಿ ಉರಿದುರಿದು ಬೀಳುತ್ತಿದ್ದಳು. ಸಾಕ್ಷಾತ್ ಅಪ್ಪನೇ ವಕಾಲತ್ ವಹಿಸಿ ನ್ಯಾಯಾಧೀಶರ ಮುಂದೆ ಒಂಟಿ ಕಾಲಿನಲ್ಲಿ ನಿಂತುಕೊಂಡರು. ಇನ್ನೊಂದು ಕಾಲು ಕುರ್ಚಿಮೇಲೆ ಕಥಕ್ಕಳಿ ಭಂಗಿಯಲ್ಲಿತ್ತು. ಲಾಯರು ಕೋಟಿನ ಗುಂಡಿಗಳನ್ನು ತಿರುಚುತ್ತ ಎಳೆದೆಳೆದು ಕೇಸಿನ ವಿದ್ಯಮಾನಗಳನ್ನು ಕೋರ್ಟಿಗೆ ಮನವರಿಕೆ ಮಾಡಿಕೊಳ್ಳುತ್ತಿದ್ದರು. ಗುಂಡಿಗಳು ಒಮ್ಮೊಮ್ಮೆ ನುಲಿಚಿಕೊಂಡು ಕೈಗಳಿಗೆ ಸಿಗದೆ ತಪ್ಪಿಸಿಕೊಳ್ಳುತ್ತಿದ್ದವು - ಕಳ್ಳ ಪೊಲೀಸ್ ಆಟದಂತೆ. ಆಗ ಲಾಯರ ಬಾಯಿಂದ ಮಾತೇ ಬರುತ್ತಿರಲಿಲ್ಲ. ಲಾಯರು ಸುಸ್ತಾಗಿ ಆಕಾಶ ನೋಡುತ್ತ ನಿಂತುಕೊಂಡುಬಿಡುತ್ತಿದ್ದರು. ತಪ್ಪಿಸಿಕೊಂಡಿದ್ದ ಕೋಟಿನ ಗುಂಡಿಗಳು ಮತ್ತೆ ಕೈಗೆ ಸಿಗುತ್ತಿದ್ದವು. ಲಾಯರು ಮತ್ತೆ ಭರ್ಜರಿಯಾಗಿ ವಾದ ಹೂಡಿದರು ಆರ್ಭಟಿಸುತ್ತ. ಹೀಗೇ ಹತ್ತಾರು ನಿಮಿಷ ನಡೆಯಿತು. ಲಾಯರ ವಾದಕ್ಕೂ ಕೋಟಿನ ಗುಂಡಿಗಳಿಗೂ ಅದೆಷ್ಟು ಅನ್ಯೋನ್ಯತೆ ಇಂಟರ್‌ನೆಟ್ ಸಂಬಂಧ - ಸಂಪರ್ಕ ದಯೆ ಲಾಯರ ಮಾತಿನ ಶಕ್ತಿ ಕೋಟಿನ ಗುಂಡಿಗಳಲ್ಲಿತ್ತೆ? ಶೀಕೆ ಆಶ್ಚರ್ಯದಿಂದ ವಕೀಲನ ದೌರ್ಬಲ್ಯವನ್ನು ಅಥವಾ ಅಭ್ಯಾಸಬಲವನ್ನು ನೋಡುತ್ತಲೇ ಇದ್ದ. ಅಜ್ಜಿ ಹೇಳುತ್ತಿದ್ದ ಬ್ರಹ್ಮರಾಕ್ಷಸನ ಕಥೆ ಅವನಿಗೆ ಥಟ್ಟನೆ ಜ್ಞಾಪಕಕ್ಕೆ ಬಂತು! ರಾಕ್ಷಸನ ಪ್ರಾಣ ಸಪ್ತ ಸಮುದ್ರಗಳಾಚೆ ಇರುವ ಬೆಟ್ಟದ ತುದಿಯ ಗುಹೆಯೊಂದರಲ್ಲಿ ಉರಿಯುತ್ತಿರುವ ಒಂದು ಮಾಯಾ ದೀಪದಲ್ಲಿ ಅಡಗಿರುತ್ತೆ. ದೀಪವನ್ನು ಆರಿಸಿದರೆ ರಾಕ್ಷಸ ಸಾಯುವನು - ಇದು ಆ ಕಥೆ! ಶೀಕೆಗೆ ಬಲು ಬುದ್ಧಿ. ಅವನಿಗೆ ಜ್ಞಾನೋದಯವಾಯಿತು. ಕೇಸು ಮುಂದಿನ ತಿಂಗಳಿಗೆ ಅಡ್ಜರ್ನ್ ಆಯಿತು.

ಪ್ರೇಮಪಿಲ್ಲದ ಹಿಂಬಸ ಬೀದಿಯಲ್ಲಿದ್ದ ಮಾಚಿದೇವ ವಾಷಿಂಗ್ ಲಾಂಡ್ರಿಯ ಮಾಲೀಕನಾದ ಸೋಮಣ್ಣನು ಶೀಕೆಯ ಪರಮ ಆಪ್ತಮಿತ್ರ. ಲಾಯರ ಬಟ್ಟೆಗಳು ಬರುವುದು ಸೋಮಣ್ಣನ ಲಾಂಡ್ರಿಗೇ. ಶೀಕೆ ಸೋಮಣ್ಣನಿಗೆ ನಡೆದ ಕಥೆಯನ್ನು ಹೇಳಿ ಸಹಾಯವನ್ನು ಕೋರಿದ. ಸೋಮಣ್ಣನಿಗೆ ಶೀಕೆ ಮೇಲೆ ಕರುಣೆಯುಂಟಾಯಿತು. ಲಾಯರ್ ಮೇಲೆ ಅವನಿಗೂ ಕೋಪ ಇತ್ತು. 'ಗುಂಡಿಗಳ ಒಡೆದೆಂಬಂತರಗಂಡ' ಎಂಬ ಬಿರುದಾಂಕಿತನಾದ ಸೋಮಣ್ಣನು ಶೀಕೆಗೆ ಅಭಯಹಸ್ತ ನೀಡಿದ. ಹಿಯರಿಂಗ್ ತಾರೀಕನ್ನು ಕೇಳಿ ತನ್ನ ಡೈರಿಯಲ್ಲಿ ಗುರ್ತು ಹಾಕಿಕೊಂಡ ಮುಂದಿನ ಹಿಯರಿಂಗ್ ಹೊತ್ತಿಗೆ ಎಲ್ಲ ಸರಿ ಮಾಡುತ್ತೇನೆ ಎಂದು ಹೇಳುತ್ತ ಕು|| ಮೆಣಸಿನಕಾಯಿ ಲಾಂಡ್ರಿಗೆ ತಂದುಕೊಟ್ಟಿದ್ದ ಅವಳ ಅಪ್ಪನ ಕರಿಕೋಟನ್ನು ತೋರಿಸಿದ.

ಕು|| ಮೆಣಸಿನ ಕಾಯಿ Vs ಶೀಕೆ ಕೇಸನ್ನು ಮ್ಯಾಜಿಸ್ಟ್ರೇಟರು ಕೂಗಿಸಿದರು. ಅಪರಾಧಿ ಕಟಕಟೆಗೆ ಬಂದು ನಿಂತ. ಫಿರ್ಯಾದ್ ದಾರಳಾದ ಕು|| ಮೆಣಸಿನ ಕಾಯಿ ಲಾಯರ್ ಅಪ್ಪನ ಪಕ್ಕದಲ್ಲೇ ನಿಂತಳು. ಯಥಾ ಪ್ರಕಾರ ಲಾಯರು ಒಂಟಿ ಕಾಲಿನಲ್ಲೇ ನಿಂತು ವಾದ ಪ್ರಾರಂಭಿಸಿದರು. ಒಂದೆರಡು ನಿಮಿಷಗಳಲ್ಲೆ ಲಾಯರ ಕೈಗಳು ಕೋಟಿನ ಗುಂಡಿಗಳನ್ನು ಹುಡುಕಲು ಒದ್ದಾಡಿದವು. ಅವು ಕೈಗೆ ಸಿಗಲಿಲ್ಲ! ಸುತ್ತಲೂ ನೋಡಿದರು ಎಲ್ಲಾ ಶೂನ್ಯ! ನ್ಯಾಯಾಧೀಶರ ಮುಖವನ್ನು ನೋಡಿದರು. ಎಲ್ಲಾ ಮೌನ! ಲಾಯರ ವಾಚಾಳತ್ವ, ಆರ್ಭಟ ಎಲ್ಲ ಮಂಗಮಾಯ! ಲಾಯರ ಬಾಯಿಂದ ಮಾತೇ ಹೊರಡಲಿಲ್ಲ. ಮತ್ತೆ ಹುಡುಕಿದರು. ಒಂದು ಗುಂಡಿಯೂ ಸಿಗಲಿಲ್ಲ. ಐದು ನಿಮಿಷ ಕಳೆದು ಹೋಯಿತು. ವಾದ ಮಾಡುವುದಕ್ಕೆ ಲಾಯರು ಪ್ರಯತ್ನಿಸುತ್ತಾರೆ. ಆಗದು ಮಗಳಿಗೆ ದಿಕ್ಕೇ ತೋಚದಂತಾಯ್ತು. ಅಪ್ಪನಿಗೆ ಏನಾಗಿದೆಯೆಂಬುದೇ ಅವಳಿಗೆ ಗೊತ್ತಾಗಲಿಲ್ಲ. ಕಾನೂನು ಅತ್ತ ಕತ್ತೆಯಂತೆ ಲತ್ತೆ ಕೊಡುತ್ತಿತ್ತುತ್ತ. ಕಡೆಗೆ ಮ್ಯಾಜಿಸ್ಟ್ರೇಟರೇ ಲಾಯರನ್ನು ಮಾತಾಡಿಸಿ 'ಆರ್ಗ್ಯುಮೆಂಟ್ ಮುಗೀತೆ?' ಎಂದು ಕೇಳಿದರು. ತೊದಲುತ್ತ ಒಂದೆರಡು ಮಾತಾಡುವುದೇ ಲಾಯರಿಗೆ ಕಷ್ಟವಾಯಿತು.

'ಹೋಗಲಿಬಿಡಿ, ಎವಿಡೆನ್ಸ್ ಇಲ್ಲ' ಎಂದರು ಜಡ್ಜ್ ಸಾಹೇಬರು. ವಾಚಾಳಿ ಲಾಯರು ಹೂಂಗುಟ್ಟುತ್ತ ಕುರ್ಚಿಮೇಲೆ ಒರಗಿದರು! ನ್ಯಾಯಾಧೀಶರು ಶೀಕೆಗೆ ''ನೀನು ಹೋಗು, ಖುಲಾಸೆ ಮಾಡಿದ್ದೇನೆ'' ಎಂದು ಹೇಳಿ ಟೇಬಲ್ ಮೇಲಿದ್ದ ಕಾಲಿಮಗ್ ಬೆಲ್ ಗುಂಡಿಯನ್ನು ಬಲವಾಗಿ ಒತ್ತಿದರು.

''ಏನಯ್ಯ ಶೀಕೆ, ಮೂರುನಾಲ್ಕು ತಿಂಗಳಿಂದಲೂ ನೀನು ಕಾಲೇಜಿಗೆ ಏಕೆ ಬರಲಿಲ್ಲ'' ಎಂದು ಕೇಳಿದರು ಡಾ|| ದಾಮೋದರಂ

''ಸಾರ್, ನೀವು ಕೋಪ ಮಾಡಿಕೊಳ್ಳುವುದಿಲ್ಲ ಎಂದರೆ ಒಂದು ಸತ್ಯವನ್ನು ಹೇಳುತ್ತೇನೆ'' ಎಂದ ಶೀಕೆ.

ಅದೇನು ಹೇಳಪ್ಪ ಎಂದರು ಪ್ರೊಫೆಸರ್ ಸಾಹೇಬರು.

"Sir, I pressed the button. it was here sir, but doors of the heaven opened when I depressed them" ಎಂದ ಶೀಕೆ.

ಜೆರ್ಸಿ ಹಸು....!

– ಪ್ರಭಾ

ಬೆಳಿಗ್ಗೆ ನಾಲ್ಕೂವರೇಗೇ ಏಳೋದೂ.

ಹಿತ್ತಲಿಗೆ ಹೋಗಿ ಬಂದು ಮನೆ ಅಂಗಳ ಗುಡಿಸೋದೂ ಸಾರಿಸೋದೂ ರಂಗೋಲೆ ಹಾಕೋದೂ, ಆಯ್ತಾ?

ಒಳಗೆ ಬಂದು ನೂರು ಕೊಡ ನೀರನ್ನ ಅರವತ್ತು ಅಡಿ ಆಳದ ಬಾವಿಯಿಂದ ಸೇದೋದೂ, ಅದನ್ನ ಬಚ್ಚಲಿನಲ್ಲಿರೋ ಹಂಡೇಗೆ ಸುರಿಯೋದೂ ನಂತರ ಹಂಡೆ ಒಲೆಗೆ ಉರಿ ಹಾಕೋದೂ ಹಂಡೆಗೆ ಉರಿ ಹಾಕೋದೂ ಅಂದರೂ ಅದೇನೂಂತೀ? ಹಸೀ ಸೌದೆ ಎಷ್ಟು ಹತ್ತಿಸಿದರೂ ಉರಿಯೋಲ್ಲ, ಹೊಗೆ, ಹೊಗೆ, ಹೊಗೆಗೆ ಕಣ್ಣು ಬಿಡೋಕ್ಕೂ ಆಗದು. ಆದರೂ ಒಲೆ ಹಚ್ಚಿ ತಣ್ಣೀರಿನಲ್ಲೇ ಕಾಲಿನ ಮೇಲೆ ನೀರು ಹಾಕ್ಕೊಂಡು ಮುಖ ಒರೆಸಿಕೊಂಡು ಒಳಗೆ ಬರೋದೂ.

ಇಷ್ಟು ಹೊತ್ತಿಗೆ ನಾದಿನೀರು, ಅತ್ತಿಗೆ ಓರಗಿತ್ತೀರೂ ಎದ್ದಿರೋರು - ಅವರಿಗೆ ಕಾಫಿ ಕಾಸಿ ಕೊಡೋ ಅಷ್ಟರಲ್ಲಿ ಗಂಡು ಪಾಳ್ಯ ಎದ್ದಿರೋದೂ. ಅವಕ್ಕೆ ಬಸಕೊಳ್ಳೋಕ್ಕೆ ಕಾಫಿ ಕಾಸೋದೂ... ಬಚ್ಚಲಿಗೆ ನಡೆದು ಒಂದು ತಂಬಿಗೆ ತಲೆ ಮೇಲೆ ಸುರಿದುಕೊಂಡು ಬಂದು ಅಡಿಗೆ ಮನೆ ಅಂತ ಸೇರಿದೆನೋ ಅದರ ಕಥೇನೇ ಬೇರೇ.

ತರಕಾರಿ ಹೆಚ್ಕೋಳೋದೂ, ಅಕ್ಕಿ ಆರ್ಸಿಕೊಳ್ಳೋದೂ, ಬೇಳೆ ವಿಂಗಡಿಸೋದೂ, ಹುಣಿಸೆಹಣ್ಣು ಅದು ಇದು ಜೋಡಿಸಿಕೊಳ್ಳೋದೂ - ಅಯ್ಯೋ ಬೇಡಪ್ಪಾ ಅದು ನೆನೆಸಿಕೊಂಡರೇನೇ ಮೈ ಝುಂ ಅನ್ನುತ್ತೆ.

ಅರವತ್ತಮೂರು ಜನ ಮನೇಲಿ ಅಷ್ಟೂ ಜನಕ್ಕೆ ಊಟ ತಿಂಡಿ, ಒಬ್ಬರಿಗೆ ಆಗಿದ್ದು ಮತ್ತೊಬ್ಬರಿಗೆ ಆಗದು. ಅವರಿಗೆಲ್ಲಾ ಬೇಯ್ಸಿ ಹಾಕಿ ನಾನು ಊಟಕ್ಕೆ ಕೂಡೋ ಹೊತ್ತಿಗೆ ಸಂಜೆ ನಾಲ್ಕೋ ಐದೋ... ಅರ್ಜೆಂಟ್ ಅರ್ಜೆಂಟಾಗಿ ಮುಸುರೆ ತಿಕ್ಕಿ ಒಳಗೆ ಬರೋ ಅಷ್ಟರಲ್ಲಿ ಐದೂವರೆ ಆಗ್ತಿತ್ತೇನೋ? ಗಡಿಯಾರ ನೋಡುಕ್ಕೆ ಯಾರಿಗೆ ಟೈಮು ಇರ್ತಾ ಇತ್ತೂ ಅಂತೀನಿ...

ಈ ಹಣೇಬರಕ್ಕೆ ಎಂಟು ಮಕ್ಕಳು ಬೇರೆ. ಊಟ ಮಾಡಿದ ಕೂಡಲೇ ಮನೇಗೇ ಒಂದೊಂದೇ ಮಕ್ಕಳ ಸವಾರಿ, ಅವಕ್ಕೆ ತಿಂಡಿ ಆಗ್ತಿತ್ತಾ, ಅದರ ಹಿಂದೇನೇ ದೊಡ್ಡವರು ಮನೆ ಸೇರೋರು. ಇನ್ನ ಅವರಿಗೆ ಕಾಫಿ ಅದಾದ ಕೂಡಲೇ ರಾತ್ರಿ ಊಟಕ್ಕೆ ತಯಾರಿ...

ಅರವತ್ಮೂರು ಜನಕ್ಕೆ ಊಟ ಅಂದರೆ ಸಾಮಾನ್ಯವೇ? ಕೆಲವರಿಗೆ ಮುದ್ದೆ, ಅದಕ್ಕೆ ಅವರೆಕಾಳಿನ ಸಾರು, ಕೆಲವರಿಗೆ ಮೆಂತ್ಯಬೇಳೆ ಹುಳೀನೇ ಬೇಕು... ಅದರ ಜತೇಗೆ ಮನೇಲಿರೋ ಮುದುಕರಿಗೆ ಫಲಾಹಾರ. ಫಲಾಹಾರದ ಕಥೇನೇ ಬೇರೆ - ಕೆಲವರಿಗೆ

ಉಪ್ಪಿಟ್ಟೇ ಆಗಬೇಕು, ಕೆಲವರಿಗೆ ಉಪ್ಪಿಟ್ಟು ಅಂದರೆ ಆಗದು ಅವಕ್ಕೆ ಅಕ್ಕಿರೊಟ್ಟೀನೋ ರಾಗಿ ರೊಟ್ಟೀನೋ ಇಲ್ಲಾಂದರೆ ದೋಸೆನೋ ಅದೂ ಇಲ್ಲಾಂದರೆ ಒತ್ತು ಶಾವಿಗೇನೋ... ಅಥವಾ ಮನೇಲಿ ಯಾವಾಗಲೂ ಅವಲಕ್ಕಿ ಇರೋದಲ್ಲಾ ಅದಾದರೂ ಅಷ್ಟೇ... ಈ ತರಹ ನೂರೆಂಟು ಅಡಿಗೆ... ಇವರದೆಲ್ಲಾ ಮುಗಿದು ನಾನು ಎರಡು ತುತ್ತು ಹೊಟ್ಟೇಗೆ ಹಾಕೋ ಹೊತ್ತಿಗೆ ಹನ್ನೆರಡೋ ಒಂದೋ ಮತ್ತೆ ಅಡಿಗೆ ಒಲೆ ಸಾರಿಸು, ಬೆಳಿಗ್ಗೇಗೆ ಸೌದೆ ಒಟ್ಕೋ... ಬೆರಣಿ ತಂದಿಟ್ಟುಕೋ... ಸರಿ ಒಂದೂವರೆಯೋ ಎರಡೋ... ಹಾಸಿಗೇಗೆ ತಲೆ ಕೊಟ್ಟರೆ ಸಾಕಪ್ಪಾ ಅಂತ ಅನಿಸೋದು. ಹಾಸಿಗೇಗೆ ತಲೆ ಕೊಟ್ಟರೆ ಕೂಡಲೇ ನಿದ್ದೆ...

ಅವಾಗವಾಗ ಮನೆಗೆ ಬರೋ ನಂಟರು, ಆರು ಜನ ಓರಗಿತ್ತೀರ ಮನೆಯವರು ಮನೇಲಿ ಬಸಿರಿ ಬಾಣಂತಿ ಅವರ ಆರೈಕೆ...

ಹೇಳೋದು ಮರೆತೆ... ಮನೇಲಿ ಹನ್ನೆರಡು ಹಸು ಬೇರೆ... ಅವುಗಳ ಹಾಲು ಕರೆಯೋದೂ ಸಗಣಿ ಬಾಚೋದೂ. ಹಾಲು ಹೆಪ್ಪುಹಾಕಿ ಮೊಸರು ತೆಗೆದು ಅದರಿಂದ ಬೆಣ್ಣೆ ಮಾಡಿಕೊಂಡು ತುಪ್ಪ ಕಾಯಿಸಿ ದೊಡ್ಡ ದೊಡ್ಡ ಜಾಡೀಲಿ ಇಡ್ತಾ ಇದ್ದೆವು... ಉಪ್ಪಿಟ್ಟಿಗೆ ತುಪ್ಪ, ಸಾರಿಗೆ ತುಪ್ಪ, ಉಪ್ಪಿನಕಾಯಿಗೆ ತುಪ್ಪ, ಹುಳೀಗೆ ತುಪ್ಪ... ಒಟ್ಟಿನಲ್ಲಿ ಮೊಸರನ್ನಕ್ಕೂ ತುಪ್ಪ ಬಸಿದು ಹಾಕ್ಕೊಂಡು ತಿನ್ತಾ ಇದ್ದ ಕಾಲ ಅದು...

ವರ್ಷಕ್ಕೆ ಎರಡು ಸೀರೆ - ಎಲ್ಲರಿಗೂ ತಂದ ಹಾಗೇನೇ ನನಗೂ ತರೋರು, ಎಲ್ಲರಿಗೂ ಒಡವೆ ಮಾಡಿಸಿದಾಗ ನನಗೂ ಒಡವೆ - ಆರು ಸವರನ್ನಿನ ಕಾಸಿನ ಸರ ನನ್ನ ಮದುವೇಲಿ ಹಾಕಿದ್ದರು, ಸೊಂಟಕ್ಕೆ ಡಾಬೂ ಇತ್ತು...

ಮೊನ್ನೆ ನಮ್ಮ ಲಲ್ಲೂ ಪ್ರಸಾದರು ಮೇನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್‌ನಲ್ಲಿ ಜೆರ್ಸಿ ಹಸು ಕಥೆ ಹೇಳಿದರಂತಲ್ಲಾ - ಇರೋ ಹಾಲನ್ನೆಲ್ಲಾ ಹಿಪ್ಪಿ ಹೀರಿಬಿಡಬೇಕು - ಇಲ್ಲಾಂದರೆ ಹಸೂಗೆ ಖಾಯಿಲೆ ಬಂದು ಬಿಡುತ್ತೆ ಅಂತ?

ಅದನ್ನ ಓದಿ ನಮ್ಮ ಅಜ್ಜಿ ಈ ಕಥೆ ಹೇಳ್ತು...

ಅಂದಹಾಗೆ ಅಜ್ಜೀಗೆ ಒಟ್ಟು ಸಂಸಾರದಲ್ಲಿ ಇರುವತನಕ ಯಾವುದೇ ಖಾಯಿಲೆ ಕಸಾಲೆ ಬರಲೇ ಇಲ್ಲವಂತೆ - ಅದಕ್ಕೆ ಸಮಯವಾದರೂ ಎಲ್ಲಿತ್ತು?

ನಮ್ಮನೆ ಜೆರ್ಸಿ ಹಸುವಿನ ಕಥೆ ಇದು...!

★★★

ಇದು ಯಾರು ಬರೆದ ಕಥೆಯೋ...

– ಲೋಕನಾಥ ದೀಕ್ಷಿತ್

''ಏನ್ರೀ ಅಪ್ಪನ ಬೆಡ್‌ಷೀಟ್ ಬದಲಾಯಿಸಿ ಆಯ್ತೇ...'' ಇವಳು

''ಆಗ್ಲೆ ಬದಲಾಯಿಸಿ ಆಯ್ತಲ್ಲಾ...''

''ಮತ್ತೆ ಆದಹಾಗಿದೆ... ಹೋಗಿ ನೋಡಬಾರದೇ... ಅಲವತ್ತಿಕೊಂಡಳು.

''ಇದು ಒಳ್ಳೆ ಗೋಳು... ಈ ವಯಸ್ಸಾದ ಮೇಲೆ ಇರಬಾರದು ನೋಡೂ...''

''ನಿಮ್ಮಂತೋರು ವಯಸ್ಸಿಗೆ ಮುಂಚೆನೂ ಇರಬಾರದು... ಹೋಗಿ ನೋಡೀಂದ್ರೆ ಏನೋ ಮಾತಾಡ್ತಾರೆ...'' ರೇಗಿದಳು.

ಈಗ ನಾನು ಮಾವ ನಾಗರಾಜಪ್ಪನ ಕೋಣೆಗೆ ನಡೆದೆ. ಭಾರವಾದ ದೇಹವನ್ನು ಪಕ್ಕಕ್ಕೆ ಸರಿಸಿ, ಬೆಡ್‌ಷೀಟ್ ಬದಲಾಯಿಸಿದೆ. ಆರೋಗ್ಯದಿಂದ ಇದ್ದಾಗ ಸಾಕಷ್ಟು ಜನಕ್ಕೆ ಮೋಸಮಾಡಿ, ನಾಲ್ಕಾರು ಸೈಟು, ಎರಡು ಮೂರು ಮನೆ ತಮ್ಮ ಹೆಸರಿಗೆ ಮಾಡಿಕೊಂಡು ಈ ಮನುಷ್ಯ ಯಾವಾಗ ಸಾಯ್ತಾನೋ ಅನ್ನುವಷ್ಟು ಅಪ್ರಿಯನಾಗಿರುವ ಮನುಷ್ಯ, ಈಗ ಹಾಸಿಗೆ ಹಿಡಿದಿದ್ದಾನೆ. ಯಮ ಯಾತನೆ ಅನುಭವಿಸುತ್ತಿದ್ದಾನೆ. ಈಗ ಈತನಿಗೆ ಜ್ಞಾನೋದಯ ಆಗಿದೆ, ತಾನು ಪರಮಾತ್ಮನ ಪಾದ ಸೇರಿದರೆ ಸಾಕು ಅನ್ನಿಸಿದೆ.

ಈಗ ನಾನು ಮಾವನ ಎದುರು ನಿಂತೆ. ಪ್ರೇತ ಕಳೆಹೊತ್ತ ಮಾವನ ಮುಖ ನೋಡಿದೆ. ಕೈಯಲ್ಲಿ ಕೂರು ಎಂದು ತೋರಿಸಿದರು. ಕೂತೆ.

''ನಾನು ಸಾಯಬೇಕಲ್ಲೋ...'' ಕೊರಗಿದರು.

''ಅದು ನಮ್ಮ ಕೈಲಿ ಇದೆಯೆ ಮಾವಯ್ಯಾ... ಅದೊಂದು ನೋಡೀ, ನಾವು ಬೇಡಿದಾಗ ಹುಟ್ಟೋಕೆ ಆಗೊಲ್ಲ... ಬೇಕೂ ಅಂದಾಗ ಸಾಯೋಕೆ ಆಗೋಲ್ಲಾ...'' ವೈರಾಗ್ಯದ ಮಾತಾಡಿದೆ.

''ವೇದಾಂತ ಬೇಡಾ ಕಣೋ... ನನ್ನ ಕೈಯಲ್ಲಿ ಈ ನರಕಯಾತನೆ ತಡಿಯೋಕೆ ಆಗೊಲ್ಲಾ... ಸರಿಯಾಗಿ ವರ್ಷವಾಯಿತು ಹಾಸಿಗೆ ಹಿಡಿದು... ನನ್ನ ಬದುಕು ಪ್ರತಿ ಒಬ್ಬರಿಗೂ ಬೇಡವಾಗಿದೆ. ಈ ಕಡೆ ಬದುಕೋಕೆ ಜೀವ ಅಲ್ಲ... ಸ್ಮಶಾಣಕ್ಕೆ ಹೆಣ ಅಲ್ಲ... ಕಣ್ಣಲ್ಲಿ ನೀರು ತಂದುಕೊಂಡರು.

ಈ ಮಾತು ನನಗೆ ಒಳಗೆ ಸರಿ ಅನ್ನಿಸಿದರೂ ಹೊರಗೆ ತೋರಿಸಲಾಗದೆ ಸೂರು ನೋಡಿದೆ. ಈಗ ಒಂದು ನಿಮಿಷ ಮೌನ. ಈಗ ಮೌನ ಮುರಿದಿದ್ದು ಸ್ವಯಂ ನನ್ನ ಹೆಣ್ಣು ಕೊಟ್ಟ ಮಾವ.

''ನಾನು ಸಾಯಬೇಕಲ್ಲೋ...'' ಮತ್ತೆ ಅದೇ ರಾಗ ಎಳೆದರು.

''ನೀವು ಹೀಗೆ ಹಠ ಹಿಡಿದ್ರೆ, ಹೇಗೆ, ಸಾವು ನಮ್ಮ ಕೈಲಿ ಇದೆಯೆ, ಮಹಾಭಾರತದ ಕಾಲದಲ್ಲಿ ಆದ್ರೆ ಭೀಷ್ಮ ತನಗೆ ಬೇಕಾದಾಗ ಸತ್ತ, ಈಗ ಕಲಿಯುಗ ಸಾಯೋಕೆ ಆಗುತ್ತೇ...

ಈಸಬೇಕು ಇದ್ದು ಜಯಿಸಬೇಕು ಅಂತ ದಾಸರು ಹೇಳಿಲ್ಲವೇ...'' ನನಗೆ ತಿಳಿದಿದ್ದು ಹೇಳಿದೆ.

''ಜಯಿಸಿದ್ದೆಲ್ಲಾ ಆಯ್ತು... ಈಗ ಸಾಯಬೇಕು ಅಷ್ಟೆ... ಡಾಕ್ಟರ್‌ಗಳು ಮರ್ಸಿ ಕಿಲ್ಲಿಂಗ್ ಅಂತ ಮಾಡ್ತಾರೆ ಅದೇ ಮಾಡೋ...''

''ಅಯ್ಯೋ ಅವೆಲ್ಲಾ ಸಾಧ್ಯವಿಲ್ಲ ಮಾವಯ್ಯ ಏನು ಅನ್ಕಂಡಿದೀರಿ ನನ್ನನ್ನ... ನಾನು ನಿಮ್ಮನ್ನ ಸಾಕ್ಷಾತ್ ಹೆಣ್ಣು ಕೊಟ್ಟ ಮಾವನ್ನ ಕೊಲೆ ಮಾಡೋದೇ... ಬೇಕಾದ್ರೆ ನೀವು ಸ್ವಂತ ಆತ್ಮಹತ್ಯೆ ಮಾಡ್ಕೊಳ್ಳೀ ಅದಕ್ಕೆ ನಾನು ಅಡ್ಡಿ ಬರೋಲ್ಲಾ...'' ನನ್ನ ಅನಿಸಿಕೆ ಹೇಳಿದೆ.

''ನನ್ನ ಕೈಯಲ್ಲಿ ಸಾಯೋಕೆ ಆಗೊಲ್ಲವಲ್ಲೋ ಕಡೆ ಪಕ್ಷ ವಿಷ ತಗೋಳ್ಳೊಕೆ ಆದ್ರೂ, ಶಕ್ತಿ ಬೇಡ್ವೇ...''

''ಹಾಗಾದ್ರೆ... ನನ್ನನ್ನ ಏನು ಮಾಡೂಂತೀರಿ...''

''ನನ್ನನ್ನ ನೇಣು ಹಾಕಿ ಪುಣ್ಯ ಕಟ್ಕೊಳ್ಳೊ ಮಹಾನುಭಾವಾ...'' ದೈನ್ಯತೆಯಿಂದ ಕೈ ಮುಗಿದರು, ಅರ್ಜುನ ಶ್ರೀ ಕೃಷ್ಣನಿಗೆ ಕೈ ಮುಗಿದ ಹಾಗೆ.

ನಾನು ಅಂದುಕೊಂಡೆ, ನಾನು ನನ್ನ ಕೆಲಸ ಮಾಡಬೇಕು, ಮಿಕ್ಕಿದ್ದು ಪರಮಾತ್ಮನಿಗೆ ಬಿಡಬೇಕು... ಈ ನನ್ನ ಮಾವ ಇದ್ದು ಅಕಸ್ಮಾತ್ ಖಾಯಿಲೆ ವಾಸಿಯಾಗಿ, ನಾಲ್ಕಾರು ಜನರನ್ನು ಕೊಲ್ಲೊಕ್ಕಿನ್ನಾ ನಾನೇ ನನ್ನ ಮಾವನನ್ನ ಮುಗಿಸಿ ಪುಣ್ಯ ಕಟ್ಟಿಕೊಳ್ಳುವುದು ಒಳ್ಳೆಯದು ಎಂದು ನನ್ನ ಒಳಮನಸ್ಸು ಮಿಡಿಯಿತು.

''ಆಯ್ತು ಮಾವಯ್ಯ... ನೀವು ಹೇಳಿದ ಹಾಗೆ ಆಗಲಿ ಆದ್ರೆ ಒಂದು ಕಂಡಿಷನ್ನು...'' ನಾನೂ

''ಏನೂ...'' ಮಾವ

''ಈ ಸಾವಿಗೆ ನಾನೇ ಕಾರಣ ಅಂತ ಕಾಗದ ಬರಿರಿ... ಅನಂತರ ಬೇಕಾದ್ರೆ ನಾನು ನಿಮಗೆ ನೇಣು ಹಾಕ್ತಿನಿ'' ನಾನು ನಿರ್ಧಾರ ತಿಳಿಸಿದೆ.

''ನನ್ನ ಕೈಯಲ್ಲಿ ಎಲ್ಲಿ ಬರಿಯೋಕೆ ಆಗುತ್ತೋ.... ನೀನು ಬರಿ ನಾನು ಸಹಿ ಹಾಕ್ತಿನಿ.... ಇವತ್ತೆ ರಾತ್ರಿ ಹನ್ನೆರಡಕ್ಕೆ ಈ ಕೆಲಸ ಆಗಬೇಕು. ಮಾವನವರು ಕಣ್ಣು ಮುಚ್ಚಿದರು.

ಈಗ ಡೀಲ್ ಆಗಿದೆ, ಅಂದರೆ ನಾನು ಕಾಗದ ಬರಿಯೋದು ಅದಕ್ಕೆ ಮಾವ ಸಹಿ ಹಾಕೋದು ರಾತ್ರಿ ಹನ್ನೆರಡಕ್ಕೆ ಎಲ್ಲರೂ ಟಿ.ವಿ. ನೋಡಿ ಮಲಗಿದ ಮೇಲೆ ಕೆಲಸ ಮುಗಿಸುವುದು.

ರಾತ್ರಿ 9.00 ಆಯ್ತು, ಮಾವ ನನ್ನನ್ನು ಕರೆದರು ''ಬರೆದು ಆಯ್ತೆ...'' ಕೇಳಿದರು.

ಇನ್ನು ಇಲ್ಲಾ... ನಾನು


''ಏಕೇ...''

''ಭಯ ಆಗ್ತಿದೆ...''

''ಹಾಗಾದ್ರೆ, ನಾನು ಸಾಯಬೇಡ್ವೇ...'' ಈ ಮನೇನಲ್ಲಿ ಏಕೆ ಈ ಇಡೀ ಮೊಹಲ್ಲಾದಲ್ಲೆ ನಾನು ಸಾಯಬೇಕೂಂತ ಕಾಯ್ತಿದ್ದಾರೆ... ''ತಗೊ ಪೇಪರ್ರು, ಬರೀ ನನಗೆ ಏಳೋಕೆ ಆಗ್ತಿಲ್ಲ, ಸಂಗ್ಟ ಸ್ವಲ್ಪ ಶಕ್ತಿ ಇದ್ದಿದ್ರೂ, ನಾನೇ ರೈಲು ಕೆಳಗೆ ಬಿದ್ದೊ ಇಲ್ಲಾ ವಿಷ ತಗೊಂಡೋ ಸಾಯ್ತಿದ್ದೆ...'' ಕೊರಗಿದರು ಮಾವಯ್ಯನವರು.

ಈಗ ನನ್ನ ಮನಸ್ಸು ಕರಗಿತು. ಪಾಪ ಈ ನನ್ನ ಮಾವನನ್ನ ಸಾಯಿಸಿ ಸ್ವರ್ಗ ಸೇರಿಸಬೇಕು. ಮನ ನುಡಿಯಿತು. ಈ ಸಾವಿಗೆ ನಾನೆ ಕಾರಣ ಅಂತ ಬರೆದಿದ್ದೂ ಆಯಿತು. ಆಫೀಸಿನಲ್ಲಿ ಪ್ರತಿ ಕಾಗದಕ್ಕೂ ಸಹಿ ಮಾಡಿದ ಅಭ್ಯಾಸ ಸಹಿ ಹಾಕಿದೆ. ಮಾವಯ್ಯನನ್ನು ಉಪಕರಿಸಲು ನೇಣೆತ್ತಿದೆ.

ಬೆಳಿಗ್ಗೆ ಗುಲ್ಲೊ ಗುಲ್ಲು. ಹಿರಿಮಗ ನರಸಿಂಹ ಪೋಲೀಸರಿಗೆ ದೂರು ಕೊಟ್ಟಿದ್ದಾನೆ. ನಾನು ಕಂಬಿ ಎಣಿಸುವಂತೆ ಆಗಿದೆ. ಜೈಲಿನಲ್ಲಿ ರೇಡಿಯೋ ವ್ಯವಸ್ಥೆ ಇದೆ, ''ಇದು ಯಾರು ಬರೆದ ಕಥೆಯೋ...'' ಅಣ್ಣಾವ್ರ ಹಾಡು ಬರುತ್ತಿದೆ. ಜನಕ್ಕೆ ಉಪಕಾರ ಮಾಡಬಾರದು, ಮನಸ್ಸು ನುಡಿಯುತ್ತಿದೆ.



ಜಡೆಯ ಜಾಲಕೆ ಒಂದು ಗಂಡು ಮಳು ಬರಲಿಲ್ಲ...
ಹೆರಳೇ ನೇಣಾಗುವ ಕ್ಷಣವನ್ನು ನಾನು ಕಾಣಬೇಕಲ್ಲ....
ಅದಕೆ ಈ ಸಿಹಿ ಕೆನ್ನೆ..ಗಲ್ಲ ಬರಲಿ ಬಳಿಗೆ ನನ್ನ ನಲ್ಲ

ಹೀಗೂ ಉಂಟೇ?

– ಬಿ.ಜಿ. ರುದ್ರಪ್ಪ

ಕೆಂಪಾಂಬುಧಿ ಕೆರೆಯ ಎಡಭಾಗದಲ್ಲಿ ಒಂದು ಗುಡ್ಡ ಇದೆ. ಈ ಸ್ಥಳ ಸೂಕ್ತವಾಗಿದೆಯೆಂದು ಭಾವಿಸಿ ಕೆಂಪೇಗೌಡರು ಪಶ್ಚಿಮದ ಕಡೆ ತಾವು ಕನಸು ಕಂಡ ಬೆಂಗಳೂರು ಇಲ್ಲಿಯವರೆಗೂ ಬೆಳೆಯಬಹುದೆಂದು ಭಾವಿಸಿ ಗೋಪುರವೊಂದನ್ನು ಕಟ್ಟಿಸಿದ್ದಾರೆ. ಅದರ ಪಕ್ಕದಲ್ಲಿ ಬಂಡಿ ಕಾಳೇಶ್ವರಿ ದೇವಸ್ಥಾನವಿದೆ. ಈ ಎರಡು ದೇವಸ್ಥಾನಗಳ ಮಧ್ಯೆ ಗುಡ್ಡವನ್ನು ಕತ್ತರಿಸಿ ಒಂದು ರಸ್ತೆಯನ್ನು ಹಲವು ದಶಕಗಳ ಹಿಂದೆ ಪಾಲಿಕೆಯವರು ನಿರ್ಮಿಸಿದ್ದಾರೆ.

ವೀರಭದ್ರಸ್ವಾಮಿ ದೇವಸ್ಥಾನಕ್ಕೆ ನಮ್ಮ ಸಂಸಾರ ಬಹಳ ಕಾಲದಿಂದಲೂ ಅಂದರೆ ಸುಮಾರು ಎಪ್ಪತ್ತು ವರ್ಷಗಳಿಂದಲೂ ವರ್ಷಕ್ಕೊಮ್ಮೆ ಕಾರ್ತಿಕ ಮಾಸದಲ್ಲಿ ಹೋಗುವುದು ವಾಡಿಕೆಯಾಗಿದೆ. ಹಿಂದಿನ ಶತಮಾನದ 5ನೇ ದಶಕದಲ್ಲಿ ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ಮಲ್ಲೇಶ್ವರದಲ್ಲಿ ವಾಸವಾಗಿದ್ದೆ. ಆಗ ಈ ದೇವಸ್ಥಾನಕ್ಕೆ ಬರುವುದೇ ಒಂದು ಸಂಭ್ರಮ. ಸ್ವಲ್ಪ ತಿಂಡಿ ಪದಾರ್ಥಗಳನ್ನು ಸಿದ್ಧಪಡಿಸಿಕೊಂಡು ಬಸ್ಸು ಹಿಡಿದು, ಗವಿಗಂಗಾಧರಸ್ವಾಮಿ ದೇವಸ್ಥಾನದ ಹತ್ತಿರ ಇಳಿದು ಅಲ್ಲಿಂದ ಜಟಕ ಮಾಡಿಕೊಂಡು ಹೋಗುತ್ತಿದ್ದೆವು. ಆಗ ದೇವಸ್ಥಾನಕ್ಕೆ ಬರುತ್ತಿದ್ದ ಭಕ್ತರ ಸಂಖ್ಯೆಯೂ ಕಡಿಮೆ. ನಿಧಾನವಾಗಿ ಅಭಿಷೇಕ ಮಾಡಿಸಿ, ದೇವಸ್ಥಾನದ ಬಿಸಿಲುಮಂಚದಲ್ಲಿ ಊಟಮಾಡಿ, ವಿಶ್ರಾಂತಿ ತೆಗೆದುಕೊಂಡು ವಾಪಸ್ಸು ಮನೆಗೆ ಬರುವ ಹೊತ್ತಿಗೆ ಸಂಜೆಯಾಗಿರುತ್ತಿತ್ತು. ಗುಡ್ಡದ ಮೇಲಿಂದ ನೋಡಿದರೆ ಕೆಂಪಾಂಬುಧಿ ಕೆರೆ ಪೂರ್ತಿಯಾಗಿ ಕಾಣುತ್ತಿತ್ತು. ಒಂದೆರೆಡು ದೇವಸ್ಥಾನಗಳನ್ನು ಬಿಟ್ಟರೆ ಸುತ್ತಲೂ ಗಿಡಮರಗಳೇ. ಗುಡ್ಡದ ಕೆಳಗಡೆ ಬರಿಯ ಕಾಡು ಪ್ರದೇಶ. ದೂರದಲ್ಲಿ ಚಾಮರಾಜಪೇಟೆಯ ಸ್ಮಶಾನ ಕಾಣುತ್ತಿತ್ತು. ಆ ಸುಂದರ ಮತ್ತು ಪ್ರಶಾಂತ ವಾತಾವರಣ ಈಗಲೂ ನೆನಪಿಗೆ ಬರುತ್ತದೆ.

ಕಾಲ ಬದಲಾಯಿತು. ಬೆಂಗಳೂರು ಎಲ್ಲ ದಿಕ್ಕುಗಳಲ್ಲೂ ಬೆಳೆಯುತ್ತಾ ಹೋಯಿತು. ಕೆಂಪೇಗೌಡ ಏನು, ನಾವೂ ಕೂಡ ಇಷ್ಟು ಸ್ವಲ್ಪ ಕಾಲದಲ್ಲಿ ಹೀಗೆ ಹುಚ್ಚು ಹುಚ್ಚಾಗಿ ಬೆಳೆಯುತ್ತದೆ ಎಂದು ಎಣಿಸಿರಲಿಲ್ಲ. ಜನಸಂಖ್ಯೆಯ ಒತ್ತಡಕ್ಕೆ ಗುಡ್ಡದ ಬದಿಯಲ್ಲಿದ್ದ ಕಾಡು ಮತ್ತು ಬಯಲು ಪ್ರದೇಶವೆಲ್ಲಾ ಬಡಾವಣೆಯಾಗಿ ಪರಿವರ್ತಿತವಾಯಿತು. ಆದರೆ, ಅವ್ಯವಸ್ಥಿತ ರೀತಿಯಲ್ಲಿ, ಈ ಬಡಾವಣೆಗೆ ಬೃಂದಾವನನಗರ ಎಂದು ನಾಮಕರಣ ಮಾಡಿದ್ದಾರೆ. ಈ ರೀತಿಯ ಅವ್ಯವಸ್ಥಿತ ಬೆಳವಣಿಗೆ ನಮ್ಮ ಉದ್ಯಾನ ನಗರಿಗೆ ಹೊಸತೇನಲ್ಲ.

ಎಂದಿನಂತೆ ಈ ವರ್ಷವೂ ಕಾರ್ತಿಕ ಮಾಸದಲ್ಲಿ ವೀರಭದ್ರಸ್ವಾಮಿ ದರ್ಶನಕ್ಕೆ ಹೊರಟೆ. ಈಗ ಭಕ್ತರು ಬರುವುದು ಜಾಸ್ತಿಯಾಗಿದೆ. ಅಭಿಷೇಕ ಮಾಡಲು ಇನ್ನೂ ಸಮಯವಿತ್ತು. ಬೃಂದಾವನ ನಗರದ ದರ್ಶನಕ್ಕೆ ಹೊರಟೆ. ನನಗೆ ತಿಳಿದ ಹಾಗೆ ಮುಖ್ಯರಸ್ತೆಗೆ ವೀರಭದ್ರಸ್ವಾಮಿ ರಸ್ತೆ ಎಂದು ಕರೆಯುತ್ತಿದ್ದರು. ಆದರೆ ಈಗ ಪಾಲಿಕೆಯು

ನೆಟ್ಟಿರುವ ಹೊಸ ಬೋರ್ಡಿನ ಮೇಲೆ ''ಬೃಂದಾವನನಗರ - ಬಂಡಿಕಾಳೇಶ್ವರಿ ರಸ್ತೆ'' ಎಂದು ಬರೆಸಿದೆ. ಕಾಳೇಶ್ವರಿ ಭಕ್ತರ ಪೈಪೋಟಿಯ ಪರಿಣಾಮ ಈ ಹೆಸರು ಬದಲಾವಣೆಗೆ ಕಾರಣವಿರಬಹುದು.

ಮುಖ್ಯ ರಸ್ತೆಯಲ್ಲಿ ನಡೆದುಹೋದಾಗ ಹಲವಾರು ಅಂಗಡಿಗಳ ಬೋರ್ಡುಗಳಲ್ಲಿ 'ವೀರಭದ್ರಸ್ವಾಮಿ ರಸ್ತೆ' ಎಂದು ಬರೆದಿದ್ದುದು ಹಾಗೆಯೇ ಇತ್ತು ಹೆಸರು ಬದಲಾಯಿಸಲು ಮತ್ತೆ ಖರ್ಚೇಕೆ ಎಂದು ಅಂಗಡಿಯವರು ಭಾವಿಸಿರಬೇಕು ಅಂದುಕೊಂಡೆ. ಇನ್ನೂ ಸ್ವಲ್ಪ ಮುಂದೆ ಹೋದಾಗ ಮತ್ತೊಂದು ಆಶ್ಚರ್ಯ ಕಾದಿತ್ತು. ಒಂದೆರಡು ಬೋರ್ಡುಗಳಲ್ಲಿ ಇದು 'ಒಂದನೆಯ ಮುಖ್ಯರಸ್ತೆ' ಎಂದು ತಿಳಿದು ಬಂದಿತು. ಅಂದರೆ, ವೀರಭದ್ರಸ್ವಾಮಿ ರಸ್ತೆ ಎಂದು ಹೆಸರಿಡುವ ಮುನ್ನ ಈ ರೀತಿ ಕರೆಯುತ್ತಿದ್ದರೆಂದು ಕಾಣುತ್ತೆ. ಇನ್ನೊಂದು ನೂರು ಹೆಜ್ಜೆಯ ನಂತರ ನನಗೆ ಗೊತ್ತಾಗಿತ್ತು ಇದಕ್ಕೆ 'ದೋಭಿಘಾಟ್ ರಸ್ತೆ' ಎಂದು ಕೂಡ ಕರೆಯುತ್ತಾರೆಂದು. ಇನ್ನೂ ಕೆಲವು ಹೆಜ್ಜೆಗಳ ನಂತರ ಪಾಲಿಕೆಯವರ ಮತ್ತೊಂದು ಬೋರ್ಡನ್ನು ನೋಡಿದೆ. ಅದರ ಪ್ರಕಾರ ಇದು ''ಹಿಂದೂ ಮಹಾಸಾಗರ ರಸ್ತೆ'' ಎಂದು ತಿಳಿಯಿತು.

ಸ್ವಲ್ಪ ಮುಂದೆ ಹೋದರೆ ರಸ್ತೆ ಬಲಕ್ಕೆ ತಿರುಗುತ್ತದೆ. ಪಾಲಿಕೆಯವರು ಈ ರಸ್ತೆಗೆ ಮತ್ತೊಂದು ಹೆಸರು ಕೊಟ್ಟಿದ್ದಾರೆ ''ಸಿಂಧೂನದಿ ರಸ್ತೆ'' ಅಂತ. ಇಲ್ಲಿಗೇ ಈ ಕಥೆ ಮುಗಿಯಲಿಲ್ಲ. ರಸ್ತೆ ಸ್ವಲ್ಪ ದೂರದ ನಂತರ ಮತ್ತೆ ಎಡಕ್ಕೆ ತಿರುಗುತ್ತದೆ. ಒಂದು ಪಕ್ಕದಲ್ಲಿ ದೋಭಿಘಾಟ್ ಇರುವುದರಿಂದ ಕೆಲವು ಅಂಗಡಿ ಮಾಲೀಕರು ತಮ್ಮ ಬೋರ್ಡ್‌ಗಳಲ್ಲಿ ಈ ರಸ್ತೆ ದೋಭಿಘಾಟ್ ರಸ್ತೆ ಎಂದು ಮತ್ತೆ ಜ್ಞಾಪಿಸುತ್ತಾರೆ.

ಇನ್ನೊಂದು ಅನಿರೀಕ್ಷಿತ ವಿಷಯ ನನ್ನ ಗಮನಕ್ಕೆ ಬಂತು. ಅಂಗಡಿಗಳ ಮುಂದೆ ಹಾಕಿರುವ ಕೆಲವು ಬೋರ್ಡುಗಳ ಪ್ರಕಾರ ಈ ಪ್ರದೇಶವು ಶ್ರೀನಗರ, ಕೆಂಪೇಗೌಡನಗರ, ಹನುಮಂತನಗರಗಳಿಗೆ ಕೂಡ ಸೇರಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ.

ಹಲವಾರು ನಾಮಗಳುಳ್ಳ ಈ ರಸ್ತೆಗೆ ಅನೇಕ ಅಡ್ಡ ರಸ್ತೆಗಳು ಸೇರಿವೆ. ಅಗಲ ತುಂಬಾ ಜಾಸ್ತಿ! ಹತ್ತರಿಂದ ಹದಿನೈದು ಅಡಿಗಳಷ್ಟು. ಎರಡು ಕಾರುಗಳು ಎದುರು ಬಂದರೆ ದಾಟುವುದು ಕಷ್ಟ. ಆದರೆ ಹೆಸರುಗಳು ಬಹು ಸುಂದರವಾಗಿದೆ. ಗಂಗಾನದಿ, ಕಾವೇರಿ, ತುಂಗಭದ್ರ, ಶರಾವತಿ ಇತ್ಯಾದಿ. ನಾಮಕರಣ ಮಾಡಿದವರಿಗೆ ಸಾಕಷ್ಟು ನದಿಗಳ ಹೆಸರುಗಳು ಜ್ಞಾಪಕಕ್ಕೆ ಬರಲಿಲ್ಲ ಎಂದು ಕಾಣುತ್ತದೆ. ಇದ್ದಕ್ಕಿದ್ದ ಹಾಗೆ ಕನ್ನಡ ವೀರರಾದ ಮದಕರಿ ನಾಯಕ, ಶಾತವಾಹನ, ಬಲ್ಲಾಳ, ಇವರುಗಳ ಹೆಸರನ್ನು ಇಡಲಾಗಿದೆ. ಈ ಸ್ಥಿತಿಯಲ್ಲಿ ಅಂಚೆಯವರು ಕಾಗದ ಪತ್ರಗಳನ್ನು ಹೇಗೆ ತಲುಪಿಸುವರೋ ದೇವರೇ ಬಲ್ಲ.

ಮೇಲೆ ಹೇಳಿದ ವಿಷಯಗಳಲ್ಲಿ ಸ್ವಲ್ಪವೂ ಉತ್ಪ್ರೇಕ್ಷೆ ಇಲ್ಲ. ಬಹುಶಃ ಪ್ರಪಂಚದಲ್ಲಿ ಎಲ್ಲಿಯೂ ಒಂದೇ ರಸ್ತೆಗೆ ಇಷ್ಟೊಂದು ಹೆಸರುಗಳು ಒಂದೇ ಬಡಾವಣೆಗೆ ಇಷ್ಟೊಂದು ನಾಮಕರಣ ಇರಲಾರದು. ನಿಮ್ಮಲ್ಲಿ ಯಾರಾದರೂ ಈ ವಿಷಯವನ್ನು ಗಿನ್ನಿಸ್ ಬುಕ್ ದಾಖಲೆಗೆ ಕಳುಹಿಸಲೂಬಹುದು. ಇನ್ನೂ ತೃಪ್ತಿಯಾಗದಿದ್ದರೆ, ಕೆಂಪಾಂಬುಧಿಯ ಕೊಳಚೆ ನೀರಿನ ಸುವಾಸನೆಯನ್ನೂ ಅನುಭವಿಸಬಹುದು.

ಲಗ್ನ ಕಟ್ಟೋದು ಅಂದ್ರೆ?

- ಸಾಯಿಲಕ್ಷ್ಮಿ .ಎಸ್

'ಎಲ್ಲಿ, ಇನ್ನೊಂದು ಸಲ ಮಂತ್ರಗಳೆಲ್ಲಾ ಒಪ್ಪಿಸಿ ಬಿಡಿ' ಕೋಲು ಹಿಡಿದು ಮಗುವನ್ನು ಬಾಯಿಪಾಠ ಒಪ್ಪಿಸೆಂದು ಕೇಳುವ ಶಿಕ್ಷಕಿಯಂತಿತ್ತು. ಜಯಾ ಮುಖದ ದರ್ಪ, ಪತಿ ನಾರಾಯಣ ರಾಯರು ಸ್ವಲ್ಪವೂ ವಿಚಲಿತರಾಗದೆ 'ಹಾಡಿದ್ದೇ ಹಾಡು ಕಿಸ ಬಾಯಿ ದಾಸ ಅಂತಾ ಅದದೇ ಶ್ಲೋಕಾನಾ ಅದೆಷ್ಟು ಸಲ ಹೇಳೋದು. ನಾಳೆ ಹೇಗೋ ನಿಭಾಯಿಸಿದರಾಯ್ತು' ಎಂದರು ಸದ್ಯದ ಆಪತ್ತಿನಿಂದ ಪಾರಾಗುವ ರೀತಿಯಲ್ಲಿ.

'ಹೇಳಿದಷ್ಟು ಸುಲಭ ಅಲ್ಲಾ ನಿಭಾಯಿಸೋದು' ಎನ್ನುತ್ತಾ ಒಳಗೆ ಎದ್ದು ಹೋದರು ಜಯಾ. ಹೆಜ್ಜೆಯೂ ಸ್ವಲ್ಪ ಬಿರುಸಾಗಿತ್ತು.

ಎಲ್ಲರೂ ಸೇರಿ ನಿಭಾಯಿಸುವ ಪ್ರಸಂಗ ಈ ಗೃಹ ಕೃತ್ಯದಲ್ಲಿ ತಂದವಳು ಕೆಲಸದ ಲಕ್ಷ್ಮಮ್ಮ. ಮಗಳ ಮದುವೆ ಗೊತ್ತಾಗಿತ್ತು, ಒಂದು ವಾರದಿಂದ ಅವಳ ವರಾತ, ಒಂದೇ ಸಮನೇ ಯಜಮಾನಿ ಜಯಾ ಇದಿರು ಸಾಗಿತ್ತು. 'ಅವ್ವಾ! ಹುಡ್ಗನ ಮನೇವ್ರು, ನಾವ್ವೊಂದು ಐದಾರು ಜನ ಬರತೀವಿ, ಸ್ವಾಮ್ಯೋರೇ ಲಗ್ನ ಕಟ್ಟಿಸಿಕೊಡಲಿ' ಅಂದಿದಾರೆ ಅಂತ.

ನಾರಾಯಣ ರಾಯರು ಜ್ಯೋತಿಷ್ಯ ಚೆನ್ನಾಗಿ ಬಲ್ಲವರೇ, ಅವರದ್ದೇನಿದ್ರೂ, ಆಯಾಯ ವರುಷದ ಪಂಚಾಂಗ ಅಟ್ಟದಿಂದಿಳಿಸಿ, ಹುಟ್ಟಿದ ಸ್ಥಳ, ಸಮಯ, ದಿನಾಂಕ ಕೇಳಿ ಬಯಸಿದವರಿಗೆ ಜಾತಕ ತಯಾರಿಸಿ ಫಲ ಹೇಳುವುದು, ಇದನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಬಂದ ಅನುಭವ. ಜಯಾ ಲಕ್ಷ್ಮಮ್ಮನಿಗೆ ಬಹಳವಾಗಿ ತಿಳಿ ಹೇಳಿದರೂ ಪ್ರಯೋಜನವಾಗಲಿಲ್ಲ. ಅವಳದ್ದು ಒಂದೇ ಹಠ.

'ಸ್ವಾಮ್ಯೋರು ಪಟ ಪಟಾಂತ ಅದೆಷ್ಟು ಮಂತ್ರ ಹೇಳತಾರೆ, ಪುಸ್ತಕ ಓದತಾರೆ. ಯಾಪಾಟಿ ಜನ ಹುಡಕ್ಕೊಂಡು ಬರತಾರೆ. ನಾನು ಹುಡ್ಗನ ಮನೆಯಾಗು ಹೇಳಿವ್ನಿ ಅವರು ಅಲ್ಲದೆ ಇನ್ಯಾರು ಲಗ್ನ ಕಟ್ಟೋ ಹಂಗೇ ಇಲ್ಲ. ಮುಂದಿನ ಸುಕ್ರವಾರ ಹಣ್ಣು ಕಾಯಿ ತರ್ತೀವಿ'.

ಜಯಾ ಪತಿಯ ತರಬೇತಿ ಶುರು ಮಾಡೇ ಬಿಟ್ಟರು. 'ಒಂದು ವಾರ ಅನ್ನೋದು ಓಡಿ ಬರತ್ತೆ. ಅವಳು ನಿಮ್ಮನ್ನ ಬಿಡೋ ಹಾಗೆ ಕಾಣೆ. ನಿಮಗೆ ಯಾವ್ಯಾವ ಶ್ಲೋಕ ಬರುತ್ತೋ ಹೇಳಿಬಿಡಿ' ನಾರಾಯಣರಾಯರದು ಮರ್ಯಾದೆ ಪ್ರಶ್ನೆ. ಕೆಲಸದ ಲಕ್ಷ್ಮಮ್ಮ ಬೀಗರ ಮನೆಯವರ ಮುಂದೆ ತಮ್ಮ ಮರ್ಯಾದೆಯನ್ನು ಏರಿಸಿಬಿಟ್ಟಿದಾಳೆ. ಇರಲಿ ಸಹಕರಿಸಿದರಾಯಿತು, ಎಂಬ ಮನೋಭಾವದಿಂದ ಹರಕೆಯ ಕುರಿಯಾಗಲೊಪ್ಪಿದರು. ತಾವು ಬಾಲ್ಯದಿಂದ ಕಲಿತ ಮಂತ್ರಗಳೆನ್ನೆಲ್ಲಾ ಪಠಿಸಿಯೇ ಬಿಟ್ಟರು. ಜಯಾ ಪರಿಶೀಲಿಸಿ, ತಮ್ಮ ಕೊಡುಗೆಯಾಗಿ ತಾವೊಂದಿಷ್ಟು ಪೂಜಾ ಮಂತ್ರಗಳನ್ನು ಸೇರಿಸಿದರು. ಹೇಳುವ ಆರ್ಡರ್ ಸೂಚಿಸಿ, ದಿನಾಲೂ ಎರಡೆರಡು ಬಾರಿ ಕಾಫಿ ಕುಡಿಯುವಾಗ ರಾಯರ ಬಾಯಿಂದ ಹೇಳಿಸುವರು.

'ಎಲ್ಲಾ ಸರಿ ಜಯಾ, ಕೆಲವು ಮಂತ್ರ ಮರೆತು ಹೋದರೆ ಅದರಲ್ಲೂ ನೀನು ಹೊಸದಾಗಿ ಸೇರಿಸೋದು'

'ಏನು ತೊಂದರೆ ಇಲ್ಲ ಬಿಡಿ ನಿಮಗೆ ಬರೋ ಮಂತ್ರಗಳನ್ನೇ ಅಂತರ ಕೊಟ್ಟು ಹೇಳಿಬಿಡಿ ಅವರಿಗೇನು ಗೊತ್ತಾಗುತ್ತೆ ಯಾವುದು ಆದ ಮೇಲೆ ಯಾವುದು, ಹೇಳಿದ್ದೇ ಹೇಳಿದರಾ ಅನ್ನೋದೆಲ್ಲಾ' ಎಂದು ಪತಿಯನ್ನು ಸಂತೈಸಿದರು.


ಅಂತೂ ಶುಕ್ರವಾರ ರಾಹುಕಾಲಕ್ಕೆ ಮುನ್ನ ತಾಂಬೂಲದ ತಟ್ಟೆ ಹಣ್ಣುಕಾಯಿ ಹಿಡಿದ ಲಕ್ಷ್ಮಮ್ಮನ ಕುಟುಂಬ ಸವಾರಿ ಚಿತ್ತೈಸಿತು. ರಾಯರಿಗಂತೂ ಅಗ್ನಿ ಪರೀಕ್ಷೆ. ಮಡದಿಯೇ ಪರೀಕ್ಷಕಿ. ಆಕೆಯೇ ಗಂಟೆ, ಸೊಡರು, ಪೂಜಾ ದ್ರವ್ಯ ಎಲ್ಲವನ್ನು ಸಿದ್ಧಮಾಡಿ, ಹಜಾರಾರದಲ್ಲೊಂದು ಹಸೆ ಮಣೆ ಅಣಿ ಮಾಡಿದ್ದರು. 'ಗಜಾನನಂ ಭೂತ ಗಣಾದಿ ಸೇವಿತಂ'ನಿಂದ ಆರಂಭ ಕಂಡ ರಾಯರ ಮಂತ್ರ ಘೋಷ ಅಡೆತಡೆಯಿಲ್ಲದೆ ಪ್ರವಾಹದಂತೆ ಮುನ್ನುಗ್ಗಲಾರಂಭಿಸಿತು. ಲಕ್ಷ್ಮಮ್ಮನ ಸಂತಸಕ್ಕೆ ಪಾರವೇ ಇಲ್ಲ. ತನ್ನ ಬೀಗರ ಕಡೆ ವಿಜಯ ನೋಟ ಹರಿಸಿ, ದೃಷ್ಟಿಯಲ್ಲೇ 'ನೋಡಿದ್ರಾ, ನಮ್ಮ ಸಾಮ್ಯೋರ ಯಾ ಪಾಟಿ ತಿಳಕೊಂಡವ್ರೆ' ಎಂಬ ಗೆಲುವಿನ ನಗೆ ಬೀರಿದಳು, ಜಯಾಗೂ ರಿಹರ್ಸಲ್‌ಗಿಂತಲೂ ಜಾಸ್ತಿಯೇ ವೋತ ಪ್ರ್ರೋತವಾಗಿ ಹರಿದು ಬರುತ್ತಿರುವ ಶ್ಲೋಕಗಳು ಆಶ್ಚರ್ಯ ಹುಟ್ಟಿಸಿ ಆಕೆ ಮನದಲ್ಲೇ ಮೆಚ್ಚಿಕೊಂಡರು. 'ನಾನು ಇವರನ್ನ ಏನೋ ಅಂದುಕೊಂಡಿದ್ದೆ ಪರವಾಗಿಲ್ಲ ಸರಕು ಜೋರಾಗೇ ಇದೆ.'

ಅಡುಗೆ ಮನೆಯಿಂದ ಜಯಾ ತಂಗಿ ಶಾರದೆ ಹುರಿಯುವ ಹುಳಿ ಅವಲಕ್ಕಿ 'ಘಮ' ಎಲ್ಲರ ಮೂಗಿನ ಹೊಳ್ಳೆಯನ್ನು ಅರಳಿಸಿದ್ದೇ ಅಲ್ಲದೇ, ರಾಯರ ಶ್ಲೋಕಗಳ ಕಡೆಯಿದ್ದ ಅವರ ಗಮನ ಈಗ ತಿಂಡಿಯ ಕಡೆ ಸರಿಯಿತು. ಇದನ್ನು ನೋಡಿಯೇ ರಾಯರ ರಭಸ ಇನ್ನು ತೀವ್ರವಾಯಿತು ಒಂದು ವಾರದ ಅಭ್ಯಾಸ, ವ್ಯರ್ಥವಾಗಬಾರದು ಹಾಗೆ ಜಯಾ ಮುಂದೆ ಕೇವಲವಾಗಬಾರದು. ಇದು ಅವರ ಪರಮ ಗುರಿ, ಜೀವನದಲ್ಲಿ ಒಂದೇ ಬಾರಿ ಹೀರೋ ಪಾತ್ರ ನಿರ್ವಹಿಸುವ ನಟನಂತೆ ಇತ್ತು ಅವರ ಕಸರತ್ತು. ಕಡೆಗೆ ಜಯಾ ಪಂಚಾಂಗ ಕೈಗಿತ್ತರು. ರಾಯರು ಕೈ ಬೆರಳುಗಳನ್ನು ಬಿಡಿಸಿ, ಎಣಿಕೆ ಹಾಕುತ್ತಾ ಲಗ್ನ ಕಟ್ಟೇ ಬಿಟ್ಟರು. ಲಕ್ಷ್ಮಮ್ಮನ ಬೀಗರಿಗಂತೂ ಎಲ್ಲರಿಗಿಂತ ಇವರ ತೂಕ ಒಂದು ಕೈ ಮೇಲೇನೇ ಎಂಬ ಪೂಜ್ಯ ಭಾವ ಉಂಟಾಗಿಯೇ ಬಿಟ್ಟಿತು. ಆ ಭಾವ ಗಟ್ಟಿಯಾಗಿಸಿದ್ದು ಮಾತ್ರ ತುಂಡು ಬಾಳೆ ಎಲೆಯ ಮೇಲೆ ಹರಡಿ, ಇಂಗು, ಕರಿಬೇವಿನ ಪರಿಮಳ ಹೊತ್ತು ಬಂದ ಹುಳಿ ಅವಲಕ್ಕಿ, ಅದರ ಪಕ್ಕದಲ್ಲಿದ್ದ ಅರಳು ಸಂಡಿಗೆ ಇವೆರಡರ ಒಡನಾಟದಲ್ಲಿದ್ದ ಕೇಸರಿಬಾತ್. 'ಎಲ್ರೂ ತೆಗೊಳ್ಳಿ. ನಮ್ಮ ಲಕ್ಷ್ಮಮ್ಮ ಬಹಳ ಕಷ್ಟಪಟ್ಟು, ಮಗಳನ್ನ ಸಾಕಿ ಮದುವೆ ಮಾಡಿಕೊಡ್ತಿದಾಳೆ. ಒಳ್ಳೇ ಮನೆ, ಜನ ಸಿಕ್ಕಿದೀರಿ. ತುಂಬಾ ಸಂತೋಷ. ಶಾರದೆ ಎಲ್ರಿಗೂ ನೀರು ಕೊಡು' ಎಂದು ಜಯಾ ಸಂಭ್ರಮದಿಂದ ತಮ್ಮ ಬೀಗರೇನೋ ಎಂಬಂತೆ ಉಪಚರಿಸಿದರು.

ಇನ್ನೊಂದು ರೌಂಡು ಬೇಸನ್‌ನಲ್ಲೇ ಬಂದ ಅವಲಕ್ಕಿಗೆ ಎಲ್ಲ ಎಲೆಗಳು ಸ್ವಾಗತ ಕೋರಿದವು. ಕಾಫಿ ಸೇವನೆಯ ವಂದನಾರ್ಪಣೆ ಉಪಹಾರಕ್ಕೆ. ಹೊರಡುವ ಮುನ್ನ

ಬಂದವರೆಲ್ಲಾ ಜಯಾ ನಾರಾಯಣ ದಂಪತಿಗಳಿಗೆ ನಮಸ್ಕರಿಸಿದರು. ಹಾಗೆಯೇ ಲಕ್ಷ್ಮಮ್ಮ ತನ್ನ ಬೀಗಿತ್ತಿಯೊಡನೆ ಸಮಾಲೋಚಿಸಿ, ತೆಂಗಿನಕಾಯಿ ತಾಂಬೂಲದಲ್ಲಿ ರಾಯರಿಗೆ ಐವತ್ತರ ನೋಟನ್ನಿತ್ತು, ತಮ್ಮ ಗೌರವಾದರ ಸಮರ್ಪಿಸಿದಳು. ಎಲ್ಲರೂ ಹಸನ್ಮುಖರಾಗಿ ಹೊರ ನಡೆದರು. ಜಯಾಗೆ ಮಾತ್ರ ಎರಡು ವಿಷಯಗಳ ಬಗ್ಗೆ ಪರಮಾಶ್ಚರ್ಯ ಒಂದು ನಿರಂತರ ಮಂತ್ರೋಚ್ಚಾರ ಮತ್ತೊಂದು ಆ ಪಾಟಿ ಜನಕ್ಕೆ ಶಾರದೆ ತಂದಿತ್ತ ಉಪಹಾರ. ಭಾವ, ನಾದನಿ ಈ ಒಗಟು ಬಿಡಿಸೇಬಿಟ್ಟರು. ರಾಯರು ''ನನ್ನನ್ನು ಕಾಪಾಡಿದ್ದು ಗಾಯತ್ರಿ ಜಪ'' ಎಂದರೆ ಶಾರದೆ ''ನನ್ನ ಕಾಪಾಡಿದ್ದು ಆ ನರಸಿಂಹ ದೇವರು, ಪ್ರಹ್ಲಾದ ಮಾತ್ರ ಭಕ್ತ ಅಲ್ಲಾ, ನಾನು ಆ ಗುಂಪಿಗೆ ಸೇರತೀನಿ'' ಲಗ್ನ ಕಟ್ಟಿಸುವ ಹಿಂದಿನ ದಿನ ನರಸಿಂಹ ಜಯಂತಿ. ಪ್ರಸಾದಕ್ಕಾಗಿ ಸೇರುಗಟ್ಟಲೆ ಮಾಡಿದ ಹುಳಿ ಅವಲಕ್ಕಿ ಹಾಗೆಯೇ ಖರ್ಚಾಗದೆ ಉಳಿದಿದ್ದು ಶಾರದೆಯ ಕೈಯಲ್ಲಿ ಬಾಂಡಲೆ ಸೇರಿ, ಬಿಸಿಯಾಗಿ, ಆಪತ್ಕಾಲಕ್ಕೆ ಆಹಾರವಾಗಿ ಆದರದಿಂದ ಎಲ್ಲರ ಉದರ ಹೊಕ್ಕು, ಅಲ್ಲಿಯ ಜಠರಾಗ್ನಿಯನ್ನು ಶಾಂತಗೊಳಿಸಿತ್ತು.

ಈ ಸೀಕ್ರೆಟ್ ತಿಳಿಯದ ಲಕ್ಷ್ಮಮ್ಮ ಮಾತ್ರ ಮಗಳ ಮದುವೆಯಾಗಿ ಹಲವಾರು ವರ್ಷ ಕಳೆದರೂ ದಿನಕ್ಕೊಂದು ಬಾರಿಯಾದರೂ ಅಮ್ಮಾವ್ರ ಮುಂದೆ 'ನನ್ನ ಮಗಳ ಮದುವೆ ಲಗ್ನ ಕಟ್ಟಿಸ್ದು ಮರೆಯೋ ಹಂಗಿಲ್ಲ ಕಣ್ರಪ್ಪಾ, ನಮ್ಮ ಬೀಗರು ಯಾವಾಗಲೂ ನೆನಸತಾರೆ' ಎನ್ನುವಳು.



ತುಂತುರು

- ದಂಡಾಕ

- When I grow up I want to be a little boy.
- ಪರೀಕ್ಷೆಯಲ್ಲಿ ಪ್ರಶ್ನೆಯಲ್ಲಿರುವ ತಪ್ಪನ್ನು ತಿದ್ದಿದರೆ ನನಗೆ extra ಅಂಕಗಳು ಸಿಗುವದೆ?
- ಬಡತನವನ್ನು ಹೋಗಲಾಡಿಸುತ್ತೇವೆ ಎಂಬ ಆ ಹುಸಿ ಎಸ್. ಎಂ. ಎಸ್. ಸಂದೇಶ ಶಾಸಕರ ಭವನದಿಂದ ಕಳಿಸಲಾಗಿದೆ ಎಂದು ತಿಳಿದು ಬಂದಿದೆ.
- ಇಂದಿನ 24 ತಾಸುಗಳ ಸುದ್ದಿ ಚಾನಲ್‌ಗಳ ಯುಗದಲ್ಲಿ ಬಚ್ಚಿಟ್ಟುಕೊಳ್ಳಲು ಜಾಗವೇ ಇಲ್ಲದಂತಾಗಿದೆ.
- ಗಗನಯಾತ್ರಿ, ಅಮೆರಿಕದಲ್ಲಿ astronaut, ರಷ್ಯದಲ್ಲಿ cosmonaut, ಚೀನಾದಲ್ಲಿ taikonaut. ಭಾರತದಲ್ಲಿ? gaganaut, akashnaut, vyomanaut?
- ಎರೆಹುಳು ತನ್ನನ್ನು ತಿನ್ನಲು ಬಂದ ಮೀನಿಗೆ ಹೇಳುತ್ತಂತೆ:
  ಸುತ್ತಿ ಸುತ್ತಿ ನೀ ಬರುತಿಹೆ ಎನಗಾಗಿ
  ಮೇಲೊಬ್ಬ ಕುಳಿತಿಹ ನಿನಗಾಗಿ
- ಬೆಂಗಳೂರು ಹೆಸರು ಬದಲಾವಣೆ ಬಗ್ಗೆ ಕನ್ನಡ ಪತ್ರಿಕೆಗಳು ಏನು ಹೇಳಬಹುದು? - ಇನ್ನು ಮುಂದೆ ಬೆಂಗಳೂರನ್ನು ಬೆಂಗಳೂರೆಂದು ಕರೆಯಲಾಗುವುದು ಎಂದೆ?
- ಸುರಂಗದ ಅಂಚಿನಲ್ಲಿ ಬೆಳಕು ಕಾಣುವದೇ ಇಲ್ಲ, ಏಕೆಂದರೆ ಅದನ್ನು ಅಗೆಯುವಾಗ ಸಿಗುವ ಮಣ್ಣಿನಲ್ಲಿ ನಾವು ಕುಸಿದೇ ಹೋಗಿರುತ್ತೇವೆ.
- Englishaa? saakappaa saaku... bedawe bedaa?
- ಪಾಯಸದ ಕೈ ನೆಕ್ಕೋದಕ್ಕೂ ನೀರ ಕೈ ನೆಕ್ಕೋದಕ್ಕೂ ವ್ಯತ್ಯಾಸವಿದೆ.
- ಪರಭಾಷಾ ಚಿತ್ರಗಳಿಗೆ ಪ್ರೋತ್ಸಾಹ: ನೆರೆಮನೆ ಹೆಂಗಸರಿಗೆ ಮುತ್ತು ಕೊಡುವ ಧೋರಣೆ.
- I can give headache to aspirin.
- ನಾಯೀನ ಹೊಡೆಯಾಕ ಬಣ್ಣದ ಕೋಲ್ಯಾಕ?
- ಸೋಮಾರಿತನ ಹಾಗೂ ಅತ್ಯುತ್ಸಾಹ ಎರಡೂ ಅಪಾಯಕಾರಿ
- Laughter is the shortest between two people.

ಉಕ್ತಿ-ಚಾಟೂಕ್ತಿ

- ಎನ್. ರಾಮನಾಥ್

ಸಚಿವರು ಸಾರ್ವಜನಿಕರಿಗೆ ಮುಕ್ತವಾಗಿ ಲಭ್ಯರಾಗಬೇಕು - ರಾಜ್ಯಪಾಲ

ಹಸಿಸುಳ್ಳು ಹೇಳಿದೆನು ಅಂದು ನಾನು... ಜನರೆನ್ನ ಕೇಳಿದರೆ ಪೇಳ್ವುದೇನೂ?
ಅಂದಿನಂತಿಲ್ಲ ಜನ, ಹೊಡೆವರೊ ನನ್ನನ್ನು... ಲಭ್ಯವಾಗುವ ದಿನವೆ ನನ್ನ ಕಡೆಗಾಲ -
ಸಚಿವ ಉವಾಚ.

★★★

ಮಾಜಿ ಸಚಿವರಿಂದ ಚಾಮುಂಡೇಶ್ವರಿಗೆ ಪೂಜೆ - ಸುದ್ದಿ

ಚಿತ್ರನಟಿಯ ಸ್ಪರ್ಶದಿಂದ ದೇವನಿಗೆ ಮೈಲಿಗೆಯೊ, ಅಯ್ಯಪ್ಪ!
ಮಾಜಿಸಚಿವ ಕೊಳಕನಿವನು, ದೂರಲಿಲ್ಲ ದೇವಿಯೂ, ಏಕೋಪ್ಪ?

★★★

ಪತಿ-ಪತ್ನಿಯರ ಜಂಟಿ ಹೆಸರಿನಲ್ಲಿ ಆಸ್ತಿ ನೋಂದಣಿ ಕಡ್ಡಾಯ ಎಂಬ ಕಾನೂನು ಶೀಘ್ರದಲ್ಲಿ ಜಾರಿಗೆ - ಸುದ್ದಿ

ಬದುಕು ಕೆಡುಕು ಕಾದಿರುವುದು ಇಂಥ ರೀತಿಯಿಂದಲಿ
ಕುಟಿಲೆ ಕೈಗೆ ಅಸ್ತ್ರವೊಂದು ಲಭಿಸಿತೋ ಸುಲಭದಲಿ

★★★

ಗೌಡರನ್ನು ಪಕ್ಷದಿಂದ ಹೊರಹಾಕಲು ಹಲವು ವರಿಷ್ಠರ ಹುನ್ನಾರ - ಸುದ್ದಿ

ಹುನಕವ ಅಲುಗಿಪ ಶಕ್ತಿಯು ಎಂದಿಗು ಬಾಲಕೆ ದೊರಕದು ತಿಳಿಯಣ್ಣ
ಗೌಡರೆ ಪಾರ್ಟಿಯು ಪಾರ್ಟಿಯೆ ಗೌಡರು ಎಂಬುವ ಮಾತೇ ದಿಟವಣ್ಣ

★★★

ವಿರೋಧಪಕ್ಷದವರಿಗೆ ನೀರೂ ಕೊಡಬೇಡಿ - ಎಡಿಯೂರಪ್ಪ

ಚುನಾವಣೆಯ ಸಮಯದಲ್ಲಿ ನೀರು ಕೇಳ್ವ ಜನತೆ ಎಲ್ಲಿ?
ಕ್ರೇಟು ತುಂಬ ಬೀರು ಇರಲು ಚಿಪ್ಸು ಬೋಂಡ ಕೇಳ್ವರಿಲ್ಲಿ.

★★★

ಕಪ್ಪುಹಣ ಇಲ್ಲದೆ ಚುನಾವಣೆ ಎದುರಿಸುವುದು ಕಷ್ಟ - ಗೌಡರು

ಕಪ್ಪುಹಣ ಎಂದೊಡನೆ ಕರಿಯ ಹಣವು ಅಲ್ಲವು
cupಉ ಉರುಫ್ ಮದ್ಯ ಮತ್ತು ಹಣ ಎಂದು ಅರ್ಥವು - ಗೌಡರ ಶಿಷ್ಯ.

★★★

ಸುಸ್ತಿದಾರರ ಚಿತ್ರ ಪ್ರಕಟಣೆಗೆ ಅಸ್ತು - ಸುದ್ದಿ

ಏನಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಭವತಿ
ಋಣಗಾತ್ರಾತ್ ಚ ದಾರಿದ್ರ್ಯಾತ್ ಕರ್ಷತಿ ಲೋಕಚಕ್ಷುಣಾಂ

★★★

Mailing Date:
5th of every month

RNI-KAR KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999. Editor: M. SHIVAKUMAR